# ಶಾಸನಗಳಲ್ಲಿ ಸಗರ–ಮಣಲೆಯರು

## ಪ್ರವೇಶ

ಕರ್ನಾಟಕ ಚರಿತ್ರೆಯಲ್ಲಿ ಅನೇಕ ಸಣ್ಣಪುಟ್ಟ ರಾಜಮನೆತನಗಳು, ಅರಸು ಕುಲಗಳು ಆಗಿಹೋಗಿವೆ. ನಾಡಿನ ನಾನಾ ಭಾಗಗಳನ್ನು, ವಿವಿಧ ಕಾಲಘಟ್ಟಗಳಲ್ಲಿ ಪ್ರಾದೇಶಿಕವಾಗಿ ಆಳಿದ ಕಿರಿಯಕುಲ (ವಂಶ)ಗಳು ತೋರಿದ ತ್ಯಾಗ, ಸಾಹಸ, ದೇಶಪ್ರೇಮ, ಭಾಷಾಪ್ರೇಮ, ಭಾಷಾಪ್ರೇಮ, ಕಲಾಪ್ರೇಮ, ಸಾಹಿತ್ಯಾಸಕ್ತಿ, ಧರ್ಮಾನುರಾಗ, ಅನ್ಯಧರ್ಮ ಸಹಿಷ್ಣುತೆ–ಮೊದಲಾದುವು ಉಪಯುಕ್ತ. ಕನ್ನಡ ಶಾಸನಗಳಲ್ಲಿ ಕಂಡುಬರುವ ನಾನಾ ವಂಶ(ಕುಲ)ಗಳನ್ನು, ಅವು ಚರಿತ್ರೆಯಲ್ಲಿ ನಿರ್ವಹಿಸಿದ ಪಾತ್ರವನ್ನು ಕುರಿತು ಕೆಲವು ಪಿಎಚ್.ಡಿ ಮಹಾಪ್ರಬಂಧಗಳನ್ನೂ, ಎಂ.ಫಿಲ್ ಪ್ರೌಢಪ್ರಬಂಧ (ಡಿಸರ್ಟೇಶನ್)ಗಳನ್ನೂ ಸಿದ್ಧಪಡಿಸಬಹುದು. ಅಷ್ಟು ವಿಪುಲವಾದ ಮಾಹಿತಿಗಳನ್ನು ಶಾಸನಗಳು ಗರ್ಭೀಕರಿಸಿವೆ. ಈ ಸಂಪ್ರಬಂಧದಲ್ಲಿ ಸಗರ (ಮಣಲೆರ) ವಂಶವನ್ನು ಕುರಿತು ವಿವೇಚಿಸಲಾಗುವುದು. ಈ ವಿವೇಚನೆಗೆ ಉಪಲಬ್ಧ ಶಾಸನ ಸಾಮಗ್ರಿಯಷ್ಟೇ ಮುಖ್ಯ ಮತ್ತು ನೇರ ಆಕರ.

ಸಗರ–ಮಣಲೆಯರ ಚಾರಿತ್ರಿಕ, ಧಾರ್ಮಿಕ, ಪ್ರಾದೇಶಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಗುರುತಿಸುವುದರೊಂದಿಗೇನೆ ಅವರ ಅಧಿಕಾರಿಕ ಏರಿಳಿತ ಪಲ್ಲಟಗಳನ್ನೂ, ತೆರಿಗೆಗಳ ಪ್ರಸ್ತಾಪವನ್ನೂ ಅಲ್ಲಲ್ಲಿ ಆನುಷಂಗಿಕವಾಗಿ ಮತ್ತು ಅಧಿಕೃತವಾಗಿ ಸೂಚಿಸಲಾಗುವುದು.

ಈ ಮನೆತನದವರು ತಮ್ಮನ್ನು ಸಗರ, ಸಗರ ಮಾರ್ತ್ತಂಡ, ಮಣಲೆರ, ಮಣಲೆರಾದಿತ್ಯ– ಎಂದು ನಿರ್ದೇಶಿಸಿಕೊಡಿದ್ದಾರೆ. ಕ್ರಿ. ಶ. ೮–೯ ನೆಯ ಶತಮಾನದ ವೇಳೆಗಾಗಲೇನೆ ಈ ಸಗರವಂಶ ಮನ್ನಣೆ ಪಡೆದಿತ್ತು. ಮೊದಲು ಮಂಡ್ಯ ಜಿಲ್ಲೆಯ ನಾಗಮಂಗಲ, ಮಳವಳ್ಳಿ, ಮದ್ದೂರು ತಾಲ್ಲೂಕುಗಳು ಮತ್ತು ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಮತ್ತು ತಿರುಮಕೂಡಲು ನರಸೀಪುರ ತಾಲ್ಲೂಕು– ಈ ಪರಿಸರದಲ್ಲಿ ಮಣಲೆರರ ಅಸ್ತಿತ್ವ, ಯುದ್ಧೋತ್ಸಾಹ, ಧೈರ್ಯ, ಆಡಳಿತ, ಅಧಿಕಾರ, ದಾನಗುಣ, ಜಿನಭಕ್ತಿ ಧರ್ಮವತ್ಸಲತೆ ಮೊದಲಾದ ಗುಣಗಳು ಪ್ರಕಟವಾಗಿವೆ. ಇದು ಕರ್ನಾಟಕದ ಚರಿತ್ರೆಯಲ್ಲಿ ಅವರು ಕ್ರಿಯಾಶೀಲರಾಗಿ ಕಾಣಿಸಿಕೊಂಡ ಮೊದಲನೆಯ ಘಟ್ಟ, ಕ್ರಿ. ಶ. ಹತ್ತನೆಯ ಶತಮಾನದ ಕಡೆಯ ದಶಕದಲ್ಲಿ ಅವರು ದಕ್ಷಿಣ ಕರ್ನಾಟಕದ ಈ ಭಾಗವನ್ನು ತೊರೆದು, ಉತ್ತರ ಕರ್ನಾಟಕದ ಪುಲಿಗೆಱೆ ಮುನ್ನೂರರ ಪ್ರದೇಶವನ್ನು ಮಹಾ ಸಾಮಂತರಾಗಿಯೂ, ಮಹಾಮಂಡಲೇಶ್ವರರಾಗಿಯೂ, ರಾಷ್ಟ್ರಕೂಟಕರ ರಾಗಿಯೂ ಆಳತೊಡಗಿದ್ದು ಶಾಸನಗಳಿಂದ ತಿಳಿದು ಬರುತ್ತದೆ.

ಮಣಲೆರರ ಪ್ರಪ್ರಥಮ ಉಲ್ಲೇಖಗಳಲ್ಲಿ ಪ್ರಮುಖವಾದವುಗಳು ದೇವರ ಬಳ್ಳಿ, ತಗ್ಗಲೂರು, ಹೆಬ್ಬಾಳು, ವಿಜಯಪುರ, ಹೆಬ್ಬಾಳು, ವಿಜಯಪುರ, ಮುತ್ತತ್ತಿ, ತಾಯಲೂರು, ಕೂಲಿಗೆರೆ, ಕಲ್ಲುಣಿ, ಆತುಕೂರು, ಪುಲಿಗೆರೆ, ಲಕ್ಷ್ಮೇಶ್ವರ, ಶಿಗ್ಗಾಂವಿ–ಮೊದಲಾದ ಶಾಸನಗಳು, ಈ ಶಾಸನಗಳ ಆಧಾರದಿಂದ ಮಣಲೆರರ ಹುಟ್ಟು ಬೆಳವಣಿಗೆ ಆಳ್ವಿಕೆ ರಾಜಕೀಯ ವರ್ಚಸ್ಸು ಜಿನಭಕ್ತಿ ರಾಜನಿಷ್ಠೆಯ ಪಲ್ಲಟ–ಇವನ್ನು ಕ್ರಮವಾಗಿ ಗುರುತಿಸಬಹುದು. ಮಣಲೆರ ವಂಶದವರ ಮೊಟ್ಟಮೊದಲನೆಯ ದಾಖಲೆ ಕಾಣಿಸುವುದು ಎಂಟನೆಯ ಶತಮಾನದ ಎರಡು ಶಾಸನಗಳಲ್ಲಿ; ೧. ಹೆಬ್ಬಾಳು ಶಾಸನ, ೨. ದೇವರಹಳ್ಳಿ ಶಾಸನ.

ಹೆಬ್ಬಾಳು ಶಾಸನದಲ್ಲಿ ಒಂದು ಯುದ್ಧದ ಪ್ರಸ್ತಾಪ ಮಾತ್ರ ಸಿಗುತ್ತದೆ. ನೊಟ್ಟಬ್ಬ (ನೊಱಂಬ/ನೊಳಂಬ) ರಾಜ್ಯಕ್ಕೆ ಸೇರಿದ ಕಾಳೆಗವೊಂದರಲ್ಲಿ ಮಣಲೆರ ಕುಣಿಜಸ್ಗಲಾಚಾರನು

ಭಾಗವಹಿಸಿದ್ದನ್ನು ಈ ಹೆಬ್ಬಾಳು ಶಾಸನ ನಮೂದಿಸಿದೆ. [ಎ.ಕ.೭ (೧೯೭೯) ೩೬ (೩ ಮಂ ೪೫)ಲನೆಯ ಶತಮಾನ, ಹೆಬ್ಬಾಳು (ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು) ಪು. ೨೭೪]. ಮಣಲೆರ ಕುಣಿಙ್ಗಲಾಚರ ಕೂಡಿಕೊಂಡಿವೆ. ಮಣಲೆರ ಎಂಬುದು ಒಬ್ಬ ವ್ಯಕ್ತಿಯ ಅಂಕಿತ/ರೂಢನಾಮ. ಕುಣಿಙ್ಗಿಲ ಎಂಬುದು ಆತನ ಊರಿನ ಹೆಸರು. ಈ ತೀರ್ಮಾನವನ್ನು ಬೆಂಬಲಿಸುವ ಪೂರಕ ಆಧಾರವೂ ಇನ್ನೊಂದು ಶಾಸನದಲ್ಲಿ ಸಿಗುತ್ತದೆ; ಆ ಇನ್ನೊಂದು ಶಾಸನ ಕೇವಲ ಹದಿಮೂರು ಸಾಲುಗಳಿರುವ ಒಂದು ವೀರಗಲ್ಲು-ಕಲ್ಲುಣಿಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ನಿಂತಿರುವ, ವೀರಗಲ್ಲು ಶಾಸನದ ಪಾಠ ಹೀಗಿದೆ: ಸ್ವಸ್ತಿ ಬೂತುಗಂ ನಡಪಿದಂ ಕರಿ ಮಾರೆಯ್ಯ ಮಣಲೇರನ ಕುಣಿಙ್ಗಿಲವೂರನ ಅಸಿವೊರದೊಳ್ ಅಸಿವೊರದೊಳ್ ಎಱೆಯಙ್ಗನೊಳ್ ನೆಱಪಿದಂ। ಸ್ವಸ್ತಿ ಕುಣುಙ್ಗ ಊರಿನ ಮಣಲೇರನ ಕಾಳೆಗದೊಳ್ ಕೊನ್ರದ ನರಗನ ಮುನ್ದೆ ಎಱೆ ಯಙ್ಗಂ ನೆಱೆಪಲೆಱೆಯಙ್ಗನ ವೇಳೆಯದಲ್ಲೆಬ್ಬೆ ಬಸವಂ ತಲೆಗಡಿಯಿಸಿದಂ [ಎ.ಕ.೭(೭೯) ೧೪೧. ೧೦ ನೆಯ ಶತಮಾನ ಕಲ್ಲುಣಿ (ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು) ಪು. ೪೪೧] .

ಹೆಬ್ಬಳು ಮತ್ತು ಕಲ್ಲುಣಿ ಶಾಸನಗಳ ಸಹಾಯದಿಂದ ಕೆಲವು ತೀರ್ಮಾನಗಳನ್ನು ತಳೆಯಬಹುದು: ಅ. ಮಣಲೆರರು ಕ್ರಿ.ಶ. ಎಂಟನೆಯ ವೇಳೆಗೆ ಭಟರಾಗಿ ಕಾಳೆಗದಲ್ಲಿ ಭಾಗವಹಿಸಿತೊಡಗಿದ್ದರು. ಆ. ನೊಳಂಬರ ರಾಜ್ಯದಲ್ಲಿ ಮಣಲೆರರು ನೊಳಂಬರ ಪರವಾಗಿ ಹೋರಾಡುತ್ತಿದ್ದರು. ಆ. ನೊಳಂಬರ ರಾಜ್ಯದಲ್ಲಿ ಮಣಲೆರರು ನೊಳಂಬರ ಪರವಾಗಿ ಹೋರಾಡುತ್ತಿದ್ದರು. ಇ. ಮಣಲೆರರು ಕುಣಿ(ಣು) ಗಲು ಎಂಬ ಊರಿನ ಕಡೆಯವರೆಂದು ಗುರುತಿಸಲ್ಪಟ್ಟಿದ್ದರು. ನೊಳಂಬರು ಕ್ರಿ.ಶ. ೭೫೦ ರಿಂದ ೧೦೫೦ ರವರೆಗೆ ಮೂರುನೂರು ವರ್ಷಗಳ ಕಾಲ ಆಳಿದರು. ಅವರು ಮೊದಲಿಗೆ ತಲಕಾಡು ಗಂಗರ ಸಾಮಂತರಾಗಿದ್ದರು: ಅನಂತರ ರಾಷ್ಟ್ರಕೂಟರ ಅಧೀನಕ್ಕೆ ಒಳಪಟ್ಟರು; ತರುವಾಯ ಅಂತಿಮವಾಗಿ ಚಾಳುಕ್ಯರ ಕೈಕೆಳಗೆ ಆಳ್ವಿಕೆ ನಡೆಸಿದರು. ಮಣಲೆರರೂ ಸಹ ಗಂಗರ, ರಾಷ್ಟ್ರಕೂಟರ, ಮತ್ತು ಕಟ್ಟಕಡೆಯದಾಗಿ ಚಾಳುಕ್ಯರ

ಸಾಮಂತರಾಗಿದ್ದವರು, ಕಲ್ಕುಣಿಯ ಶಾಸನಕ್ಕಿಂತ ಶತಮಾನಗಳಷ್ಟು ಹಿಂದಣದಾದ ಹೆಬ್ಬಾಳು ಶಾಸನದ ಬಲದಿಂದ ಹೇಳಬಹುದಾದ ಹೊಸ ಮಾತಿದೆ. ಮಣಲೆರರು ಗಂಗರ ಅಧೀನತೆಗೆ ಬರುವ ಮೊದಲು ನೊಳಂಬರ ಕೈಕೆಳಗೆ, ನೊಳಂಬರ ಸೇನ್ರೆಯ ಅಧಿಕಾರಿಗಳಾಗಿದ್ದಂತೆ ಕಾಣುತ್ತದೆ. ಮಣಲೆರರು ನೊಳಂಬರ ಕಡೆಯಿಂದ ಗಂಗರ ಆಶ್ರಯಕ್ಕೆ ಬಂದು ಸೇರಿದ್ದು ಎಂಟನೆಯ ಶತಮಾನದಲ್ಲಿ. ಇದಕ್ಕೆ ಅಸ್ಖಲಿತವಾದ ಗಟ್ಟಿ ಆಧಾರವೆಂದರೆ ಪ್ರಾಚೀನವಾದ ದೇವರಹಳ್ಳಿಯ ಐತಿಹಾಸಿಕ ಮಹತ್ವದ ಶಾಸನ. [ಎ.ಕ. ೭ (೧೭೯) ೧೪೯ (೪ ನಾಮಂ ೮೫) ೭೭೬-೭೭ ದೇವರಹಳ್ಳಿ (ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು) ಪು. ೧೪೪-೪೭].

ದೇವರಹಳ್ಳಿಯ ಶಾಸನ ಸಂಸ್ಕೃತ ಭಾಷೆಯಲ್ಲಿದೆ. ಇದು ಗ್ರಾಮಸ್ಥರೊಬ್ಬರ ವಶದಲ್ಲಿದ್ದ ಏಳು ತಾಮ್ರ ಶಾಸನಬದ್ಧ ಒಕ್ಕಣೆ. ಗಂಗರ ಪೃಥವೀ ಕೊಂಗುಣಿ ಮಹಾರಾಜ ಶ್ರೀ ಪುರುಷನು ಮಾನ್ಯಪುರದಲ್ಲಿ (ಮಣ್ಣೆ) ಇರುವಾಗ ನಡೆದ ಘಟನೆ ಇದರಲ್ಲಿ ನಿರೂಪಿತವಾಗಿದೆ. ದುಂಡು ನಿರ್ಗುಂದ ಯುವರಾಜನ ಮಗ ಪರಮಗೂಳ ಪೃಥ್ವೀ ನಿರ್ಗುಂದರಾಜನ ಮಡದಿಂ, ಸಗರ ವಂಶದ ಕುಂದಾಚ್ಚಿಯು ಈ ಶಾಸನದ ಕೇಂದ್ರ ಬಿಂದು. ಕುಂದಾಚ್ಚಿಯ ತಂದೆ ಮರುವರ್ಮ; ಈತನ ಪತ್ನಿ ಒಬ್ಬ ಪಲ್ಲವಾಧಿರಾಜನ ಮಗಳು (ಅವಳ ಹೆಸರು ಶಸನದಲ್ಲಿ ನಮೂದಾಗಿಲ್ಲ). ಮರುವರ್ಮನು ಸಗರ ಕುಲಜನು; ಈತನ ಕಾಲ ಸು. ಕ್ರಿ. ಶ. ೭೫೦. ಈತನ ಮಗಳು ಕುಂದಾಚ್ಚಿಯು ಶ್ರೀಪುರದಲ್ಲಿ 'ಲೋಕ ತಿಲಕಜಿನಾಲಯ' ವನ್ನು ಕಟ್ಟಿಸಿದಳು. ಕುಂದಾಚ್ಚಿಯ ಪತಿಯಾದ ಪರಮಗೂಳ ನಿರ್ಗುಂದರಾಜನ ವಿಜ್ಞಪ್ತಿಯಿಂದ ಗಂಗರ ಪ್ರಭು ಶ್ರೀಪುರುಷನೂ (೭೨೬-೭೭೭) ಲೋಕ-ತಿಲಕ- ಜಿನಗೃಹಕ್ಕೆ ಪೊನ್ನಳ್ಳಿಗ್ರಾಮವನ್ನು ತೆರಿಗೆ ರಹಿತವಾಗಿ ಬಿಟ್ಟುಕೊಟ್ಟನು; ಇದರ ಕಾಲ ಕ್ರಿ. ಶ. ೭೭೬-೭೭. ದೇವರಹಳ್ಳಿಯ ಶಾಸನವು ಎಂಬತ್ತು ಸಾಲುಗಳ ಸಾಕಷ್ಟು ದೀರ್ಗವಾಗಿರುವ ಒಂದು ದೊಡ್ಡ ಶಾಸನವಾಗಿರುವುದರಿಂದ, ಪ್ರಸ್ತುತ ಸಂಪ್ರಬಂಧದ ವಿಚಾರ ಚರ್ಚೆಗೆ ಒಳಪಡುವ ಶಾಸನ ಭಾಗವನ್ನು ಮಾತ್ರ ಉದ್ಧರಿಸುತ್ತೇನೆ:

ಆತ್ಮಜಿನಿತ ವಿಶೇಷ ನಿಶ್ಯೇಷೀಕೃತ ರಿಪು ಲೋಕಃ

ಲೋಕ ಹಿತಮಧುರ ಮನೋಹರ ಚರಿತಃ ಚರಿತಾರ್ಥ ತ್ರಿಕರಣ ಪ್ರವೃತ್ತಿಃ

ಪರಮಗೂಳ ಪ್ರಥಮ ನಾಮಧೇಯ ಶ್ರೀ ಪ್ರಿಥುವೀ ನಿರ್ಗ್ಗುನ್ದರಾಜೋ

ಜಾಯತಙ್ಪಲ್ಲವಾಧಿರಾಜ ಪ್ರಿಯಾತ್ಮಜಾಯಾಂ

ಸಗರ ಕುಲತಿಲಕಾತ್ಮರುವರ್ಮ್ಮಣೋ ಜಾತಾ ಕುನ್ದಾಚ್ಚಿ ನಾಮಧೇಯಾ

ಭರ್ತೃಭವನ ಅಬಭೂವ ಭಾರ್ಯ್ಯಾ ತಯಾ ಸತತ ಪ್ರವೃತ್ತಿತ

ಧರ್ಮ್ಮಕಾರ್ಯ್ಯಯಾ ನಿರ್ಮ್ಮಿತಾಯ ಶ್ರೀಪುರೋತ್ತರ ದಿಶಮಲಂಕುರ್ವ್ವತೇ

ಲೋಕ ತಿಲಕ ನಮ್ನೇ ಜಿನಭವನಾಯ । [ಅದೇ: ಪು. ೧೪೬, ಸಾಲು ೫೫-೫೮]

ಮೇಲಿನ ಶಾಸನ ಪಾಠದ ಸಾರಾಂಶ; ದುಂಡು ನಿರ್ಗುಂದ ಯುವರಾಜನ ಅಕ್ಕರೆಯ ಮಗನಾದ ಪರಮಗೂಳ ಪ್ರಿಥುವೀ ನಿರ್ಗುಂದ ರಾಜನು ತನ್ನ ರಾಜಕೀಯ ನೈಪುಣ್ಯದಿಂದ, ಯಾರನ್ನೂ ಬಿಡದ ಹಾಗೆ, ಎಲ್ಲ ಹಗೆಗಳನ್ನೂ ಸದೆಬಡಿದನು. ಈತನ ಸನ್ನಡತೆಯೂ ಸಚ್ಚಿಂತನೆಯೂ ಲೋಕಾಕರ್ಷಕವಾಗಿತ್ತು. ಈತನ ಪಟ್ಟಮಹಿಷಿಯೇ ಕುಂದಾಚ್ಚಿ. ಈಕೆ ಸಗರಕುಲ ಸಂಜಾತೆ, ಸಗರಕುಲ ತಿಲಕನಾದ ಮರುವರ್ಮನ ಮಗಳು. ಮರುವರ್ಮನ ಮಡದಿಯ ಪಲ್ಲವಾಧಿರಾಜನ ಪ್ರೀತಿಯ ಪುತ್ರಿ. ಕುಂದಾಚ್ಚಿಯು ತನ್ನ ಗಂಡ ಪರಮಗೂಳ ನಿರ್ಗುಂದ ರಾಜನ ಅರಮನೆಯಲ್ಲಿ ಇರುವಾಗ ಧಾರ್ಮಿಕ ಕಾರ್ಯನಿರತಳಾಗಿದ್ದಳು. ಶ್ರೀಪುರದ ಉತ್ತರ ದಿಕ್ಕಿಗೆ ಶೋಭಾಯಮಾನವದ ಲೋಕತಿಲಕ ಜಿನಾಲಯವನ್ನು ಮಾಡಿಸಿದಳು.

ದೇವರಹಳ್ಳಿಯ ಈ ಶಾಸನ ಗಂಗಕುಲದರಸರ ಇತಿಹಾಸಕ್ಕೂ ಸಗರ ಕುಲದ ಚರಿತ್ರೆಗೂ ಕಾಯಕಲ್ಪವೆಸಗಿದಂತಿದೆ. ಕ್ರಿ.ಶ. ೭೭೬ರ ವೇಳೆಗಾಗಲೇನೆ ಮರುವರ್ಮ ನೆಂಬ ಪ್ರತಿಷ್ಠಿತ ವ್ಯಕ್ತಿ ಈ ಸಗರವಂಶಕ್ಕೇನೆ ಭೂಷಣವೆನಿಸಿದ್ದನು. ಈತನ ಸಾಮಾಜಿಕ ಸ್ಥಾನಮಾನ ಎಷ್ಟಿತ್ತೆಂದರೆ, ಒಬ್ಬ

ಪಲ್ಲವಾಧಿರಾಜನೂ ಸಹ ತನ್ನ ಮಗಳನ್ನು ಮರುವರ್ಮನಿಗೆ ಮದುವೆ ಮಾಡಿಕೊಟ್ಟಿದ್ದನು. ಅಲ್ಲದೆ ಮರುವರ್ಮನ ಮಗಳಾದ ಕುಂದಾಚ್ಚಿಯನ್ನು ಗಂಗರ ಸಾಮಾಂತನಾದ ಪರಮಗೂಳ ಪ್ರಿಥುವೀ ನಿರ್ಗುಂದರಾಜನು ವಿವಾಹವಾಗಿದ್ದನು. ಜತೆಗೆ ಈ ಶಾಸನ ಬೆಳುಕು ಚೆಲ್ಲುವ ಪ್ರಮುಖ ಧಾರ್ಮಿಕ ವಿಚಾರವೆಂದರೆ, ಸಗರ ಕಲುದವರು ಅಚ್ಚ ಜೈನರಾಗಿದ್ದರೆಂಬುದು. ಸಗರ ವಂಶಜರ ಪ್ರಭಾವ ವಲಯದ ವ್ಯಾಪ್ತಿ ಮತ್ತು ಸ್ವರೂಪವನ್ನು ಈ ಶಾಸನ ಚೆನ್ನಾಗಿಯೇ ಕನ್ನಡಿಸಿದೆ.

೧. ಇದೇ ಕಾಲದ, ಗಂಗ ಭೂಪ ಶ್ರೀಪುರುಷನ ಆಳ್ವಿಕೆಗೆ ಒಳಪಟ್ಟ ತಗ್ಗಲೂರು ಶಾಸನದಲ್ಲಿ ವಿನೋದಿ ಮಣಲೆರನೆಂಬುವನು ತಳಿಯೂರನ್ನು ಆಳುತ್ತಿದ್ದನೆನ್ನಲಾಗಿದೆ [ಎ.ಕ. ೩ (೧೯೭೪) ಗುಂಡ್ಲುಪೇಟೆ ४३ (ಎ.ಕ. ४, ಗು.ಪೇ. ೮೭) ಸು. ೭೫೦ ತಗ್ಗಲೂರು (ಮೈಸೂರು ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು) ಪು. ೩೮ ಸಾಲು: ४]. ಇದು ದೇವರಹಳ್ಳಿಯ ಶಾಸನದಷ್ಟೇ ಪ್ರಾಚೀನವಾದದ್ದು; ಮರುವರ್ಮ ಮತ್ತು ಈ ವಿನೋದಿ ಮಣಲೆರರು ಸಮಕಾಲೀನರು.

೨. ಇದೇ ಕಾಲದ ಮೂಡಿಗೆರೆ ೩೬ ನೆಯ ಶಾಸನದಲ್ಲಿ ಬರುವ ಸಿಂದಾ ವಿಷಯೇ ಮಣಲೇ ಆಳ್ಕೇ ತ್ರಿಶಕ-ಎಂಬ ಹೇಳಿಕೆಯನ್ನೂ ಅವಶ್ಯ ಪರಿಭಾವಿಸಬೇಕು [ಎ.ಕ.೬ ಮೂಡಿಗೆರೆ-೩೬. ೭೫೦-೫೧. ಜಾವಳಿ (ಚಿಕ್ಕಮ/ಮೂಡ್ಗೆರೆ ತಾ) ಪು. ೧೫೨-೫೩. ಸಾಲು: ४೨: **IWG:** ೧೯೮४: ನಂ. ४३: ಪು. ೧೬೫].

ಪ್ರಾಚೀನ ಶಾಸನಗಳು

ಮಣಲೆರರನ್ನು ಕುರಿತು ಪ್ರಸ್ತಾಪಿಸುವ ನಾಲ್ಕನೆಯ ಪ್ರಾಚೀನ ಶಾಸನವೆಂದರೆ ವಿಜಯಪುರದ್ದು. ಈ ಅತೇದಿ ಶಾಸನ ಗಂಗರ ಎಱೆಯಪ್ಪ ದೊರೆಯ ಆಳ್ವಿಕೆಗೆ (೮४३-೭೦), ಕ್ರಿ.ಶ. ಒಂಬತ್ತನೆಯ ಶತಮಾನಕ್ಕೆ ಸೇರಿದ್ದು:

ಸ್ವಸ್ತಿ ಶ್ರೀ ಎಱೆಯಪ್ಪೊರಾ ಪೃಥುವೀ ರಾಜ್ಯಂ

ಗೆಯೆ ಶೌಚ ಮಣಲೆಯರುಂ ನನ್ನಿಮಟಿಲೂರುಂ ಸನ್ತೊ

ನಮಾಳ ಕಿಱುವೆಟ್ಟಿಗರಾ ಪನ್ನಿರ್ವ್ವರ್ಗ್ಗಂ ರಣಪಾರರಾ

ಮಣಲೆಯರಸರಾ ಸಮಾಧಿಯೆ ಸಮಾಧಿ ಇಲ್ಲಾದೆ

ಱ್ ಪೊನ್ನೆತ್ತಿಕೊಳೆ ಕೊಟ್ಟ ಒಕ್ಕಲ್ಗೆ ಪೊನ್ವಿಟ್ಟು ಪುಗಿಸಿದಾರ್

[ಎ.ಕ. ೫ (೧೯೭೬) ೧೪೬ (೧೪ ತಿನ ೨೫೩) ಕ್ರಿ.ಶ. ೯ನೆಯ ಶ. ವಿಜಯಪುರ (ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು) ಪು. ೫೫೪]. ಇದರ ಸಾರಾಂಶ: ರಣಪಾರ ಮತ್ತು ಮಣಲೆಯರಸರ ಅನುಮತಿಯನ್ನು ಪಡೆದು, ಶೌಚ ಮಣಲೆಯರ ಹಾಗೂ ನನ್ನಿ ಮಣಲೆಯರ ಹಾಗೂ ನನ್ನಿ ಮಱಿಲೂರರು ಕಿಱುವೆಟ್ ನಗರದ ಹನ್ನೆರಡು ಜನಕ್ಕೂ ಹೊನ್ನನಿತ್ತು ನೆಲದ ಒಕ್ಕಲನ್ನು ಹೊಂದಿದರು. ಇದರಲ್ಲಿ ನನ್ನಿ ಮಱೆಲೂರರ ಎಂಬುದು ನನ್ನಿಮಣಲೆಯರ ಎಂದಿರಬಹುದು. ಈ ಶಾಸನ ರಚನೆಯ ವೇಳೆಗೆ ಆಗಲೇನೆ ಈ ಮಣಲೆರರಿಗೆ ‘ಮಣಲೆಯರಸ’ ಎಂಬ ‘ಅರಸ’ ಸ್ಥಾನಕ್ಕೇರಿಸಲಾದ ಮರ್ಯಾದೆ ಸಂದಿದೆ. ಎಱೆಯಪ್ಪನೆಂದರೆ ಒಂದನೆಯ ಎಱೆಗಂಗ ನೀತಮಾರ್ಗದೊರೆ.

ಇದೇ ವಿಜಯಪುರದ, ಇದೇ ಅವಧಿಗೆ ಸೇರಿದ ಇನ್ನೊಂದು ಶಾಸನವೂ ಮಹತ್ವದ್ದಾಗಿದೆ:

ಸ್ವಸ್ತಿ ಶ್ರೀ ಕೊಙ್ಗುಣಿ ಮುತ್ತರಸರ್ ಶಿವ

ಮಾರ ಪ್ರಿಥುವೀ ರಾಜ್ಯಂ ಕಿಯೆ ಮಣಲೆ ಅರಸ

ಕ್ಯೂರ್ಮ್ಬಿಡಿ ಕಿಟಿಲೆನಾಡಾಳೆ ಕುಳತ್ತೊರೊಂಪೆಡೆ

ದಿ ಕಿಱುಪೆಟ್ಟಿಗರಾಳೆ ಕಿಱುಪೆಳ್ನ

ನ್ನಿರ್ವ್ವರ್ಕ್ಕಮ್ಪುನ್ಪುಲಮೆಲ್ಲ ಪತ್ತೊನ್ದಿ ವಿ (ಟ್ವಾರ್)

[ಅದೇ: ೧೪೫ (೧೪, ೨೫೨) ವಿಜಯಪುರ, ೯ಶ. ಪು. ೫೫೪. ಸಾಲು: ೧–೫; ಮೈ.ಆ.ರಿ. ೧೯೧೨. ಪು. ೩೨]. ಇದು ಎಂಟನೆಯ ಶತಮಾನಾಂತ್ಯದ ಶಾಸನವೆಂದು, ಭಾಷಾವಿಜ್ಞಾನ ದೃಷ್ಟಿಯಿಂದ ಪರಿಶೀಲಿಸಿ, ಹೇಳಬಹುದು. ಪೂರ್ವದ ಹಳೆಗನ್ನಡ ಭಾಷೆಯ ಭಾಷಿಕ ಲಕ್ಷಣಗಳು ಕಾಣುತ್ತವೆ. ಗೆಯ್ (ಮಾಡು) ಧಾತುವಿನ ಮೂಲ ರೂಪವಾದ *ಕೆಯ್–ಎಂಬ ಅಘೋಷಸ್ವನಾದಿಯಿರುವ ರೂಪಕ್ಕೆ ಸೇರಿದ ಕಿಯೆ (ಕೆಯ್–, ಕೆಯೆ–; ಗೆಯ್–, ಗೆಯೆ–: ಕೆಯ್–ಕೆಯೆ–ಕಿಯೆ–) ಎಂಬ ಜ್ಞಾತಿರೂಪವನ್ನು ಉಳಿಸಿಕೊಂಡಿದೆ. ರಾಜ್ಯಂ ಕಿಯೆ ಎಂದಿರುವ ರೂಪವು ಮುಂದೆ ೯–೧೦ ನೆಯ ಶತಮಾನದಿಂದ ರಾಜ್ಯಂಗೆಯೆ ಎಂದಾಗಿದೆ. ಕಿಟಿಲೆ ನಾಡಾಳೆ ಎಂಬುದು ಕೆಳಲೆ ನಾಡಾಳೆ ಎಂದು ಬೆಳವಣಿಗೆ ಪಡೆಯುತ್ತದೆ. ದ್ರಾವಿಡ ಭಾಷೆಗಳಲ್ಲಿ ಸ್ವರಸ್ವನಪಲ್ಲಟ ಪ್ರಕ್ರಿಯೆಯಲ್ಲಿ ಇ/ಎ ವ್ಯತ್ಯಾಸವೂ ಒಂದು: ಕಿಱಿರೆ–ಕೆಱಿಲೆ ಎಂಬಲ್ಲಿ ಈ ವ್ಯತ್ಯಾಸ ಅಡಗಿದೆ. ಟಕಾರ ಱಕಾರದ ಪ್ರಯೋಗದಲ್ಲಿಯೂ ಪ್ರಾಚೀನ ಕನ್ನಡದ ಸೇರಿತ್ತು. ಕುಳತ್ತೂರು: ಕೊಳತ್ತೂರು ಎಂಬಲ್ಲಿಯೂ ಉ/ಒ ಸ್ವರ ಪರಿವರ್ತನೆಯಿದೆ. ಇದಾನ್–ಇದನ್, ಅಟಿಪ್ಪೊನ್–ಅಟಿಪೊನ್ ಮುಂತಾದ ಹಿಂದಣ ಬಳಕೆ ಗಮನಿಕೆಗೆ ಅರ್ಹವಾಗಿದೆ. ಇದು ಎಂಟನೆಯ ಶತಮಾನಾಂತ್ಯದ ಗಂಗರ ಕೊಙ್ಗುಣಿ ಶ್ರೀ ಮುತ್ತರಸ ಶ್ರೀಪುರುಷನ ಮಗನಾದ ಇಮ್ಮಡಿ ಶಿವಮಾರನ (೭೮೮–೮೧೬) ಆಳ್ವಿಕೆಗೆ ಸೇರಿದ್ದು. ಇದರಲ್ಲಿ ಕೂಂಬಡಿ–ಕಿಟಿಲೆನಾಡನ್ನು ಆಳುತ್ತಿದ್ದ ಮಣಲೆ ಅರಸನ ಪ್ರಸ್ತಾಪವಿದೆ. ವಿಜಯಪುರದ ಎರಡೂ ಶಾಸನಗಳಲ್ಲಿ ನಿರ್ದಿಷ್ಟ ಧರ್ಮದ ಸಂಬಂಧಗಳಿಲ್ಲವೆಂದು ಮೇಲುನೋಟಕ್ಕೆ ತೋರಿದರೂ, ಒಳನೋಟಕ್ಕೆ ಜೈನಧರ್ಮದ ಸ್ಪರ್ಶ ಕಾಣುತ್ತದೆ: 'ಮಣಲೆಯರ ಸರಾ ಸಮಾಧಿಯೆ ಸಮಾದಿ' ಎಂಬುದು ಸಮಾದಿಮರಣದಿಂದ ಮುಡಿಪಿದ ಸಂಗತಿಯನ್ನು ಹೇಳುತ್ತದೆ. **[Inscriptions of the Western Gangas:** (೧೯೮೪); ೮೯.೯ ಶ. ಪು. ೨೮೦**]**

ಬಿ. ಎಲ್. ರೈಸ್‌ರವರು ಸಿದ್ಧಪಡಿಸಿದ ತಾಯಲೂರು ಶಾಸನದ ಮೂಲ ಕಲ್ಲು ಕಳೆದುಹೋಗಿದೆ: ಆದರೆ ಆ ಶಾಸನದ ಒಕ್ಕಣೆ ಪೂರ್ತಿ ಅಚ್ಚಾಗಿದೆ. ಅದರ ಆರಂಭದ ವಾಕ್ಯ ಮಾತ್ರ ಈ ಸಂಪ್ರಬಂಧಕ್ಕೆ ಸಂಬಂಧಪಟ್ಟಿದೆ. ಪ್ರಸ್ತುತತೆಯಿರುವ ಮೊದಲನೆಯ ಪಂಕ್ತಿ ಹೀಗಿದೆ: ಶ್ರೀಮನ್ಮಣಲಯರನ ಸನ್ಮಥ. ಅಂದರೆ ಆ ಶಾಸನೋಕ್ತ ಮಣಲೆಯರನ್ನು ಆ ಕಾಲದ ಮತ್ತು ಆ ಭಾಗದ ಸ್ಥಳಾಧಿಪತಿಯಾಗಿ ಆಳುತ್ತಿದ್ದು ಅವನ ಸಮ್ಮತಿಯಿಂದ ಶಾಸನ ಹೊರಟಿದೆ. ಇದರ ಕಾಲ ಶಕವರ್ಷ ೮೨೯: ಇದು ಮದ್ದೂರು ತಾಲ್ಲೂಕಿಗೆ ಸೇರಿದೆ (ಎ.ಕ.೭ (೧೯೭೯) ಮದ್ದೂರು ೫೬ (೩ ಮಂ ೧೪). ೯೦೭. ತಾಯಲೂರು (ಮಂಡ್ಯಜಿಲ್ಲೆ, ಮದ್ದೂರು ತಾಲ್ಲೂಕು) ಪು. ೨೮೪-೮೫).

ಕಾಲಕ್ರಮದಲ್ಲಿ ಅಳವಡುವ ಆರನೆಯ ಶಾಸನ ಕೂಲಿಗೆರೆಯದು: ಅಲ್ಲಿಯ ಕೆರೆಯ ಏರಿಯ ಮೇಲಿರುವ ಕಲ್ಲಿನ ಶಾಸನದ ಒಕ್ಕಣೆ:

ಭದ್ರಂ ಭದ್ರೇಶ್ವರಸ್ಯ ಸ್ಯಾತ್ಕುದ್ರವಾದಿ ಮದಚ್ಛಿದ:
ವರ್ಧಮಾನ ಜಿನೇನ್ದ್ರಸ್ಯ ಶಾಸನಾಯ ಭವದ್ವಿಷೆ ||
ಶಕನೃಪ ಕಾಲಾತೀತ ಸಮಸರಸತಂಗಳೆಣ್ಟುನೂಱ
ಮುವತ್ತೆಣ್ಟನೆಯ ವರಿಷಂ ಪ್ರವರ್ತ್ತಿಸುತ್ತಿರೆ
ಸ್ವಸ್ತಿ ಕೊಙ್ಗುಣಿವರ್ಮ್ಮಧರ್ಮ್ಮ ಮಹಾರಾಜಾಧಿರಾಜ
ಕುವಳಲಪುರವರೇಶ್ವರ ನನ್ದಗಿರಿನಾಥ ಶ್ರೀಮತ್ ನೀತಿಮಾರ್ಗ
ಪೆರ್ಮ್ಮನುಡಿಗಳ ರಾಜ್ಯಮುತ್ತರೋತ್ತರ ಸಲುತ್ತಮಿರೆ ಸಕರ
ವೇಬ್ದೇ ಕುವೇಬ್ದೇ ಮಣಲೆಯಾರಂ ಕನಕಗಿರಿಯ ತೀರ್ತ್ಥದ ಮೇಗೆ
ಬಸದಿಯ ಮಾಡಿಸಿ ಅರಸರಧ್ಯಕ್ಷದೊಳ್ ಕನಕಸೇನ ಭಟಾರಗ್ಗೆ
ತಿಪ್ಪೆಯೂರೊಳಾದ ಅಟ್ಟದೆಱೆಯುಂ ಕುಱುದೆಱೆಯುಂ
ಮುಳ್ಳ ಸಮನ್ತದೆಱೆಯೆಲ್ಲವಮ್ಬಿಟ್ಟನಿದನಱಿದೊಂ

ಕೆಱೆಯುಮಾರಮೆಯುಮನಱೆದು ಕೊಣ್ಡೊಮ್ಮಹಾಪಾತಕನ್ ||

[ಎ.ಕ. ೭('೬೯) ೧೦೦ (೩ಮಳವಳ್ಳಿ ೩೦) ೯೧೬-೧೭. ಕೂಲಿಗೆರೆ (ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು) ಪು. ೩೧೩]

ಈ ಕೂಲಿಗೆರೆಯ ಶಾಸನ ಗಂಗರ ಒಡೆಯನಾದ ನೀತಿಮಾರ್ಗ ಪೆರ್ಮ್ಮಾನಡಿಯ (೦೭-೨೧) ಆಡಳಿತ ಕುಲದ್ದು: ಈ ಇಮ್ಮಡಿ ನೀತಿಮಾರ್ಗ ಪೆರ್ಮ್ಮಾನಡಿಯು ಒಂದನೆಯ ಬೂತುಗಣ (೮೭೦) ಮಗನಾದ ಎಱೆಗಂಗನೇ ಆಗಿದ್ದಾನೆ. ಕೂಲಿಗೆರೆ ಶಾಸನವು ಗಂಗರ ಸಾಮನ್ತನಾದ ಮಣಲೆಯರನು ಕನಕಗಿರಿಯ ತೀರ್ತ್ಥದಮೇಗೆ ಬಸದಿಯನ್ನು ಮಾಡಿಸಿದನು: ಕನಕಗಿರಿ-ತಿಪ್ಪೂರು ತೀರ್ಥವು ೮-೯ ನೆಯ ಶತಮಾನದ ವೇಳೆಗೆ ಕೀರ್ತಿಶಾಲಿಯಾಗಿತ್ತು. ಬಸದಿಯೊಡೆಯರಾದ ಕನಕಸೇನ ಭಟಾರರಿಗೆ ತನ್ನ ಸಾಮಂತ ತೆರಿಗೆಯ (ಅಟ್ಟದೆಱೆ ಮತ್ತು ಕುಱುದೆಱೆಗಳೂ ಸೇರಿರುವ) ಆದಾಯಗಳನ್ನು ಬಿಟ್ಟುಕೊಟ್ಟನು. ಈ ವಿನಾಯಿತಿ ತೀರ್ಪಿಗೆ ಅಧ್ಯಕ್ಷರಾಗಿ ಗಂಗರ ಎಱೆಯ ನೀತಿಮಾರ್ಗ ಪೆರ್ಮ್ಮಾನಡಿಯೇ ಇದ್ದುದು ಇದರ ಮಹತ್ವನ್ನು ಮನವರಿಕೆ ಮಾಡಿಕೊಡುತ್ತದೆ. ಹಾಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಬಸ್ತಿ ಅರೆ ತಿಪ್ಪೂರಿನಲ್ಲಿರುವ (ತಿಪ್ಪೂರು ತೀರ್ತ್ಥವಾದ) ಚಿಕ್ಕಬೆಟ್ಟವೇ ಈ ಕನಕಗಿರಿ. ಮೈಸೂರು ಜಿಲ್ಲೆಯ ಮಲೆಯೂರಿನಲ್ಲಿರುವ ಜೈನ ಬೆಟ್ಟಕ್ಕೂ ಕನಕಗಿರಿ ಎಂಬ ಹೆಸರಿದೆ; ಅದರ ಮೇಲೆ ಜೈನ ದೇವಾಲಯವಿದ್ದು ಪ್ರಾಚೀನ ತೀರ್ತ್ಥವಾಗಿದೆ. ರಾಯಚೂರು ಜಿಲ್ಲೆಯಲ್ಲಿಯೂ ಒಂದು ಕನಕಗಿರಿಯಿದೆ. ತಿಪ್ಪೂರು ಶಾಸನೋಕ್ತ ಮಣಲೆಯರನು ೯೧೬ ರ ವೇಳೆಗೆ ಸಾಮಂತನಾಗಿದ್ದನು. ಈತನ ಮಗನೇ ಆತಕೂರು ಶಾಸನೋಕ್ತ ಅಧೀನತ್ವ-ಇವು ಸಮಂಜಸವಾದ ಹೊಂದಾಣಿಕೆ ತೋರಿಸುತ್ತವೆ. ಆತಕೂರು-ತಿಪ್ಪೂರು ತೀರ ಸಮೀಪದ ಊರುಗಳು.

ಕೂಲಿಗೆರೆ ಶಾಸನವು, ದೇವರಹಳ್ಳಿಯ ಶಾಸನದಂತೆ, ಸಗರ–ಮಣಲೆರೆ ಮನೆತನವು ನಿಷ್ಠಾವಂತ ಜೈನರೆಂದು ನಿವೇದಿಸಿದೆ. ತಿಪ್ಪೂರು ತೀರ್ಥವಾದದ್ದೂ, ವರ್ಧಿಷ್ಣುವಾಗಿ ಬೆಳಗಿದ್ದೂ ಮಣಲೆಯರ ಮತ್ತು ಗಂಗರ ಶ್ರದ್ಧಾಸಕ್ತಿಯ ಫಲ. ಸುಮಾರು ಏಳು ನೂರು ವರ್ಷಗಳವರೆಗೆ ಈ ಕ್ಷೇತ್ರ ಪ್ರಕಾಶಿತವಗಿತ್ತೆಂಬುದಕ್ಕೆ ಶಾಸನಗಳು ಸಾಕ್ಷಿಯಾಗಿ ನಿಂತಿವೆ [ಎ.ಕ.೭ (೭೯)೫೧, ೫೨, ೫೪ ೭೬, ೧೦೬ ಮೊದಲಾದ ಶಾಸನಗಳು]. ಕೂಲಿಗೆರೆಯ ಶಾಸನದ ತರುವಾಯ ಬರುವ ಕಲ್ಕುಣಿಯ ಶಾಸನವನ್ನು ಕುರಿತು ಮೇಲೆ ಹೆಬ್ಬಾಳು ಶಾಸನಗಳನ್ನು ವಿಮರ್ಶಿಸುವಾಗ ಪ್ರಸ್ತಾಪಿಸಿದ್ದಾಗಿದೆ. ದೇವರಹಳ್ಳಿ, ಹೆಬ್ಬಾಳು, ವಿಜಯಪುರ, ಕೂಲಿಗೆರೆ ಕಲ್ಕುಣಿ ಶಾಸನಗಳಾದ ಮೇಲೆ ಕಾಲಕ್ರಮದಲ್ಲಿ ಬರುವುದು ಆತುಕೂರು ಶಾಸನ. ಇದು ಕರ್ನಾಟಕದ ಇತಿಹಾಸದಲ್ಲಿ ಸುಪ್ರಸಿದ್ಧವಾದ ಶಾಸನ.

ಆತಕೂರು ಶಾಸನವನ್ನು, ಅದರ ಆಯಾಮಗಳನ್ನು ಚರ್ಚಿಸುವ ಪೂರ್ವದಲ್ಲಿ ಮುತ್ತತ್ತಿಯ ಶಾಸನವನ್ನು ಕುರಿತು ಸಂಗತಿಗಳ ಚರ್ಚೆಯೊಂದಿಗೆ ವಿವರಿಸಬೇಕಾಗಿದೆ. ಶಾಸನದ ಪಾಠ ಹೀಗಿದೆ:

. . . . . . . . . . . . .

ನಿಬಪ್ಪಂಡಿತ ಪದಕಮಳ. . . . .

ಕಿಕುಳ ವಳಭೀಪುರವರೇಶ್ವರ ಬಾ

ಲಾತ ಪಂಚನೇತ್ರಧ್ವಜ ವಿರಾಜಮಾನ

ಅರಿರೂಪಸಿಂಗ ನನ್ನಿಯ ಸೇಕರ ಶ್ರೀ

ಮುತ್ತತ್ತಿಯಂ ನಾಗಕುಮಾರಯ್ಯಂಗೆ ಕೊಟ್ಟ

[ಎ.ಕ. ೫ (೧೯೭೬) ತಿನ (೨ ತಿನ ೧೦೨) ೯–೧೦ ಶ. ಮುತ್ತತ್ತಿ (ಮೈಸೂರು ಜಿಲ್ಲೆ, ತಿ.ನ. ತಾಲೂಕು) ಪು. ೪೩೯–೪೦]

ಈ ತ್ರುಟಿತ ಶಾಸನದಲ್ಲಿ, 'ಬಾಲಾತ' ಎಂಬುದು 'ಬಾಲಾತ(ಪಂ)' ಎಂದಿರಬೇಕು. 'ಬಾಲಾತ(ಪಂ) ಪಂಚನೇತ್ರಧ್ವಜ. . . .' ಎಂಬುದು ಸರಿಯಾದ ಪಾಠ. ಬಾಲಾತ(ಪಂ) ಎಂಬ ಶಬ್ದಾಂತ್ಯದಲ್ಲಿಯೂ, ಪಂಚನೇತ್ರಧ್ವಜ ಎಂಬ ಶಬ್ದಾದಿಯಲ್ಲಿಯೂ–'ಪಂ–ಪಂ' ಎಂದು ಎರಡು ಸಲ ಬರಬೇಕು. ಬರೆಹಗಾರನಿಗೆ ಭ್ರಮೆಯಿಂದಾಗಿ ಒಂದು 'ಪಂ' ಬಿಟ್ಟುಹೋಗಿದೆ, ಇದಕ್ಕೆ ಸದೃಶಾಕ್ಷರಲೋಪವೆಂದು ಹೆಸರು. ಇದನ್ನು ಸರಿಪಡಿಸಿ ಕೊಂಡರೆ ಶಾಸನ ಪಾಠ ಅಕ್ಲಿಷ್ಟವಾಗಿ, ಅರ್ಥ ಪ್ರತೀತವಾಗುತ್ತದೆ: "ವಳಭೀಪುರ ವರೇಶ್ವರನೂ, ಬಾಲಸೂರ್ಯ ಪ್ರಕಾಶ ಮಾನನೂ (ಬಾಲಾತಪಂ), ಪಂಚನೇತ್ರಧ್ವಜ ವಿರಾಜ ಮಾನನೂ, ಹಗೆಗಳಿಗೆ ಸಿಂಹನೂ, ಸತ್ಯವಂತರ ಮುಡಿಯೂ ಆದ.. . . . ಎಂಬಾತನು ಮುತ್ತತ್ತಿಯನ್ನು ನಾಗಕುಮಾರನಿಗೆ ಕೊಟ್ಟನು" ಎಂಬುದು ಈ ಶಾಸನದ ಅನ್ವಯ.

ಪಂಚನೇತ್ರ ಮತ್ತು ಪಂಚನೇತ್ರ ಧ್ವಜ ಎಂಬೆರಡು ಶಬ್ದಗಳು ಕನ್ನಡ ಸಾಹಿತ್ಯದಲ್ಲಿ ಅಪರೂಪದ ವಿಶಿಷ್ಟ ಪ್ರಯೋಗಗಳು. ಈ ಎರಡೂ ಶಬ್ದಗಳು ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ಕನ್ನಡ ನಿಘಂಟಿನಲ್ಲಿ (ಸಂಪುಟ: ಎರಡು) ದಾಖಲಾಗಿಲ್ಲ. ಪ್ರಾಯಃ ೨೧ನೆಯ ಶತಮಾನದಲ್ಲಿ ಮರು ಮುದ್ರಣವಾಗುವಾಗ ಈ ಎರಡು ಹೊಸ ಶಬ್ದಗಳನ್ನು ಮುಖ್ಯ ಉಲ್ಲೇಖವಾಗಿ ಸೇರಿಸಬೇಕು, ಮತ್ತು ಮುತ್ತತ್ತಿ ಶಾಸನದ ಪ್ರಯೋಗಗಳನ್ನು ಸೇರಿಸಬೇಕು. ಪಂಚನೇತ್ರ ಎಂದರೆ ಸಿಂಹ, ಕೇಸರಿ ಎಂದರ್ಥ ಪಂಚನೇತ್ರಧ್ವಜ ಎಂದರೆ ಸಿಂಹಧ್ವಜ, ಕೇಸರಿ ಕೇತು ಎಂದರ್ಥ.

ಮುತ್ತತ್ತಿಯ ಶಾಸನೋಕ್ತ ಪ್ರಧಾನ ವ್ಯಕ್ತಿಯು ಮಣಲೆರನೇ ಎಂಬುದನ್ನು ಅಂತಬಾಹ್ಯ ಪ್ರಾಮಾಣ್ಯಗಳಿಂದ ಸ್ಥಾಪಿಸಬಹುದು. ವಳಭೀಪುರವರೇಶ್ವರ ಎಂಬ ಪ್ರಯೋಗಾಧಾರದ ಬಲದಿಂದ, ಈ ಶಾಸನ ಮಣಲೆಯರ ವಂಶಜನೊಬ್ಬನನ್ನು ಸುಟ್ಟಿಸಿ ತೋರುತ್ತದೆಂದು ಸೀತಾರಾಮ ಜಾಗೀರ್‌ದಾರ್ ಊಹಿಸಿರುವುದು ಸರಿಯಾಗಿದೆ. (ಕೆಳಲೆ ಹೈಹಯರು, 'ಗುಲಗಂಜಿ; ಐದನೆಯ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಪುಟ (೧೯೯೩) : ಪು. ೯೯–೧೦೧;

(ಸಂ)ನೀ. ಗಿರಿಗೌಡ) ಆದರೆ ಅದಕ್ಕಿಂತಲೂ ಬಲಿಷ್ಠವಾದ ಸಾಕ್ಷಿ ಪುರಾವೆಗಳು 'ಪಂಚನೇತ್ರಧ್ವಜ ವಿರಾಜಮಾನ' ಎಂಬ ಪ್ರಯೋಗ. ಸಗರ–ಮಣಲೆರ ಕುಲಜರನ್ನು 'ಕೇಸರಿ ಕೇತು' [ಸೌ.ಇ.ಇ. ೨೦. ೪೭. ೧೧೭೪ ಲಕ್ಷ್ಮೇಶ್ವರ (ಧಾರವಾಡ ಜಿಲ್ಲೆ ಶಿರಹಟ್ಟಿ ತಾಲ್ಲೂಕು) ಪು. ೫೪. ಸಾಲು: ೧೫] ಎಂದೂ, 'ಸಿಂಹಲಾಂಛನ' ಜೈನಸ್ಪರ್ಶವಿದೆ: ನಿಬ್ಬಪ್ಪ(ರ್ನ೯ಂ) ಡಿತ ಪದಕಮಳ, ನಗಕುಮಾರಯ್ಯಂಗೆ ಎಂಬೆರಡು ಪ್ರಯೋಗಗಳು ಈ ಆಲೋಚನೆಗೆ ಜೀವತುಂಬಿ ಪುಷ್ಟಿ ನೀಡುತ್ತವೆ. ಮುತ್ತತ್ತಿಯ ಶಾಸನದ ತರುವಾಯ ಆತುಕೂರ ಶಸನವನ್ನು ಪರಿಶೀಲಿಸಬಹುದು.

ಮಣಲೆರ ವಂಶವನ್ನು ಸಗರವಂಶ ಎಂಬ ಇನ್ನೊಂದು ಪರ್ಯಾಯ ಹೆಸರಿನಿಂದ ಮೊಟ್ಟಮೊದಲೆಯದಾಗಿ ಕರೆದಿರುವುದು, ಕ್ರಿ.ಶ. ೭೭೬ ರ ದೇವರಹಳ್ಳಿ ಶಾಸನದಲ್ಲಿಯೇ. ಅದರ ತರುವಾಯದ ನಾಲ್ಕು ಪ್ರಾಚೀನ ಶಾಸನಗಳಲ್ಲಿ ಸಗರಕುಲ– ಸಗರವಂಶ ಎಂಬ ಪ್ರಯೋಗ ಕಾಣುವುದಿಲ್ಲ. ಆದರೆ ಆತುಕೂರು ಶಾಸನದಲ್ಲಿ ಇವೆರಡೂ ಮಾತುಗಳು ಸ್ಪಷ್ಟವಾಗಿ ಬಂದಿವೆ.

ಆತುಕೂರು ಶಾಸನ

ಗಂಗರ ಪೆರ್ಮಾನಡಿ ಬೂತುಗನು (ಬುತುಗ ೨೦) ರಾಷ್ಟ್ರಕೂಟರ ಮುಮ್ಮಡಿ ಕೃಷ್ಣ (ಕನ್ನರದೇವ)ನ (೯೩೮–೬೧) ಮಹಾಮಂಡಲೇಶ್ವರನಾಗಿ ಆಳುತ್ತಿದ್ದನು. ಬೂತುಗನ ಕೈಕೆಳಗಿನ ಮಣಲೆರನನ್ನು ಆತುಕೂರು ಶಾಸನದಲ್ಲಿ 'ಸಗರವಂಶವಳಭೀಪುರವರೇಶ್ವರ' ಎಂಬ ಪ್ರಶಸ್ತಿ ಸಹಿತ ಪರಿಚಯಿಸಲಾಗಿದೆ. ಈ ವಳ(ಲ) ಭೀಪುರವೆಂಬುದು ಮಧ್ಯಭಾರತದ ನರ್ಮದಾ ಮತ್ತು ರೇವಾನದೀ ತೀರದ ಪ್ರಾಚೀನ ನಗರ; ಸಗರರು ಉತ್ತರದಿಂದ ದಕ್ಷಿಣಕ್ಕೆ ಸರಿದು ಬಂದ ವಲಸೆಗಾರರು. ಸಗರ ವಂಶಜರು ೭–೮ ನೆಯ ಶತಮಾನದ ವೇಳೆಗೆ ಕನ್ನಡ ನಾಡಿನ ಮುಖ್ಯ ಪ್ರವಾಹದಲ್ಲಿ ಮಿಳಿತವಾಗಿದ್ದರು.

ಆಗಲೇ ಹೇಳಿರುವಂತೆ, ಕರ್ನಾಟಕದ ಶಾಸನಗಳ ಚರಿತ್ರೆಯಲ್ಲಿ ಹೆಸರುವಾಸಿ ಯಾಗಿರುವ ಆತಕೂರು ಶಾಸನವು ಮಣಲೆರನ ಸಾಹಸಗಾಥೆ. ಮಣಲೆರನ ಸೂಚನೆ ಯಂತೆ, ಪ್ರಾಯಃ ರತ್ನತ್ರಯರಲ್ಲಿ ಒಬ್ಬನೂ, ಜಿನಸಮಯ ದೀಪಕರಲ್ಲಿ ಒಬ್ಬನೂ ಆದ ಪೊನ್ನಕವಿಯು ಈ ಶಾಸನವನ್ನು ರಚಿಸಿರಬೇಕೆಂದು ಭಾವಿಸಲಾಗಿದೆ; ಈ ಅಂಶವು ಪ್ರಸ್ತುತ ಶಾಸನದ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದೆ. ರಾಷ್ಟ್ರಕೂಟರಿಗೂ ಚೋಳರಿಗೂ ನಡೆದ ಹಲವು ಯುದ್ಧಗಳಲ್ಲಿ, ತಕ್ಕೋಳದಲ್ಲಿ ಜರುಗಿದ ಕಾಳೆಗವು ಒಂದು ಐತೀರ್ಹಿನ ದೊಡ್ಡಯುದ್ಧ. ಕ್ರಿ.ಶ. ೯೪೯-೫೦ರಲ್ಲಿ ನಡೆದ ಈ ಮಹಾಸಮರದಲ್ಲಿ 'ಚೋಟಿರಕೋಟೆ' ಯೆಂಬ ಸಿಂಧುರವನ್ನು (ಆನೆ), ಸಗರ ತ್ರಿಣೇತ್ರ (ಮುಕ್ಕಣ್ಣ) ನಾದ ಮಣಲೆರನ ಆನೆಯ ಶಿರಾಗ್ರ-ನೆತ್ತಿ ಬಿರಿಯುವಂತೆ ಪೊಯಿದು ಕೊಂದನು. ಈ ಶೂರತ್ವದಿಂದಾಗಿ ಮಣಲೆರನು ಕದನೈಕ ಶೂದ್ರಕನೆನಿಸಿದನು.

ತಕ್ಕೊಲ ಕಾಳೆಗದಲ್ಲಿ ಮೂವಡಿಚೋಳ ರಾಜಾದಿತ್ಯನನ್ನು ಕೊಂದವನು, ರಟ್ಟರ ಚಕ್ರವರ್ತಿಯಾದ ಮುಮ್ಮಡಿ ಕೃಷ್ಣನೊ, ಅಥವಾ ಕೃಷ್ಣನ ಸಾಮಂತ ಇಮ್ಮಡಿ ಬೂತುಗಯ್ಯನೋ, ಇಲ್ಲವೇ ಬೂತುಗನ ಕೈಕೆಳಗಿನ ಅಧಿಕಾರಿ (ಆತನಾಳು)ಸಗರ ಕುಲದ ಮಣಲೆರನೊ ಎಂಬ ಬಗ್ಗೆ ಚರ್ಚೆ ನಡೆದಿದೆ. ರಾಜಾದಿತ್ಯನನ್ನು ಕೊಂದವನು ಬೂತುಗನೆಂದೂ, ರಾಜಾದಿತ್ಯನ ಆನೆಯನ್ನು ಕೊಂದವನು ಮಣಲೆರನೆಂದೂ ಒಂದು ಸಾರ್ವತ್ರಿಕ ಅಭಿಪ್ರಾಯವಿದೆ. ಮಣಲೆರನು ಜೆ.ಎಫ್. ಫ್ಲೀಟರೂ (ಎ.ಕ.೩. ೩೫) ಅರ್ಥೈಸಿದ್ದಾರೆ. ಆದರೆ ಆತುಕೂರು ಶಾಸನ ಪಾಠವನ್ನು ಮನನ ಮಾಡಿದರೆ, ಮೂವಡಿ ಚೋಳ ರಾಜಾದಿತ್ಯನೊಂದಿಗೆ ಯುದ್ಧಮಾಡಿ ಅವನನ್ನು ಕೊಂದವನು ಕಚ್ಚೆಗೆ ಕೃಷ್ಣರಾಜನೆನ್ನಬಹುದು. ಅಲ್ಲದೆ ಪೆರ್ಮಾಡಿ ಬೂತುಗನಂಕಕಾಱನಾದ ಮಣಲೆರನು ಕಾಳಿಯನ್ನು ಕೋರಿ ಪಡೆದದ್ದೂ ಸಹ ಚಕ್ರವರ್ತಿ ಕೃಷ್ಣ (ಕನ್ನರ) ನಿಂದಲೇ ಎಂದೂ ಸ್ಪಷ್ಟವಾಗುತ್ತದೆ. ಎಪಿಗ್ರಾಫಿಯ ಕರ್ನಾಟಕದ ಏಳನೆಯ ಸಂಪುಟವನ್ನು ಪರಿಷ್ಕರಿಸಿ ಪ್ರಕಟಿಸಿದ (೧೯೭೯) ಸಂಪಾದಕರು, ಆತಕೂರಿನ ಶಾಸನಕ್ಕೆ ಟಿಪ್ಪಣಿಸುವಾಗ, ಮಣಲೆರನು ತನ್ನ ಸಾಹಸಕ್ಕಾಗಿ ನಾಯಿ

ಕಾಳಿಯನ್ನು ಬೂತುಗನಿಂದ ಬೇಡಿ ಪಡೆದನೆಂದು ಹೇಳಿದ್ದಾರೆ (ಪು. ೨೭೬); ನಿಜ. ಆದರೆ ಈ ಅಭಿಪ್ರಾಯಕ್ಕೆ ಪೀಠಿಕೆಯಲ್ಲಿ ತಕ್ಕ ಬೇರೆ ತಿದ್ದುಪಡಿಯನ್ನು ಸೂಚಿಸಿ ಉಪಕರಿಸಿದ್ದಾರೆ (ಪು. ೧-೧:)-

"ಶಾಸನ ಪಾಠದ ವಿಶ್ಲೇಷಣೆಯಿಂದ (ಕಾಳಿನಾಯಿಯ) ಕೊಡುಗೆಯನ್ನಿತ್ತವನು ಮುಮ್ಮಡಿ ಕೃಷ್ಣನೆಂದು ಗೊತ್ತಾಗುವುದು. ಈ ಅರಸನು ತಕ್ಕೋಲದಲ್ಲಿ ಚೋಳ ಅರಸನೊಡನೆ ಯುದ್ಧಮಾಡಿ, ಅವನನ್ನು ಕೊಂಡು, ವಿಜಯಶಾಲಿಯಾಗಿ ಮುನ್ನಡೆಯುತ್ತಿದ್ದನೆಂದು ಶಾಸನ ಮೊದಲು ಉಲ್ಲೇಖಿಸುತ್ತದೆ. ಅನಂತರ ಗಂಗಪ್ರಭು ಇಮ್ಮಡಿ ಭೂತುಗನ 'ಆಳು' ಮಣಲೆರನು ಕದನದಲ್ಲಿ ಹೋರಾಡಿ, ರಾಷ್ಟ್ರಕೂಟ ಅರಸನ ಮೆಚ್ಚುಗೆಗೆ ಪಾತ್ರನಾಗಿ, ಏನನ್ನಾದರೂ ಕೋರಿಕೊಳ್ಳಲು ಕೇಳಿಕೊಂಡಾಗ, ಅವನಿಂದ ಬೇಟೆನಾಯಿಯೊಂದನ್ನು ಬೇಡಿ ಪಡೆದುಕೊಂಡ ವಿಷಯವನ್ನು ತಿಳಿಸುತ್ತದೆ. ಶಾಸನದಲ್ಲಿ ಬೂತುಗನು ಮಣಲೆರನ ಪ್ರಭುವಾಗಿ ಮಾತ್ರ ಕಾಣಿಸಿಕೊಂಡಿದ್ದಾನೆಂಬುದು ಸ್ಪಷ್ಟ. ಆದ್ದರಿಂದ ಬೇಟೆನಾಯಿಯನ್ನು ಕೊಡುಗೆಯಾಗಿ ನೀಡಿದವನು ಅರಸಕಚ್ಚೆಗೆ ಕೃಷ್ಣರಾಜನೇ (ಮುಮ್ಮಡಿ ಕೃಷ್ಣ) ಹೊರತು ಇಮ್ಮಡಿ ಬೂತುಗನಲ್ಲ. ಆದ್ದರಿಂದ ಈ ಸಂಪುಟದ (ಸಂಪುಟ ೭) ೨೭೬ನೆಯ ಪುಟದಲ್ಲಿ ಕೊಟ್ಟಿರುವ ಶಾಸನದ ಪರಿಚಯ ಟಿಪ್ಪಣಿಯನ್ನು ಹೀಗೆ ಓದಿಕೊಳ್ಳಬಹುದಾಗಿದೆ.

**The record States that while the Rastrakuta King Kannaradeva, also referred to as kachchega Krishnaraja, was on the victrious march after killing Muvadi-chola in the battle of Takkola. Manalera of the Sagara family, a subordinate (ankakara) of permanadi Butuga, the Ganga, bearing the title Valabhipuravareshvara, prayed for and got from the king a**

**hound named Kali as a token of appreciation of the valour displayed by him in the battle. (ibid).”**

ಈಗ ಹಾಲಿ ಈ ವೀರಗಲ್ಲು ಶಾಸನವನ್ನು, ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿ ತಂದಿಡಲಾಗಿದೆ. ಮೇಲೆ ಚರ್ಚಿಸಲಾದ ಚಾರಿತ್ರಿಕ ಸಂಗತಿಯಿರುವ ಶಾಸನದ ಒಕ್ಕಣೆ ಹೀಗಿದೆ:

೭. ಸ್ವಸ್ತಿ ಸಕಳಲೋಕ ಪರಿತಾಪಾಪಹತ ಪ್ರಭಾವಾವತಾರಿತ ಗಙ್ಗಪ್ರವಾಹೋದಾರ ಸಗರವಂಶವ

೮. ಳಭೀಪುರವರೇಶ್ವರನುದಾರ ಭಗೀರಥನಿಱಿವಬೆಡಙ್ಗ ಸಗರ ತ್ರಿಣೇತ್ರಂ ಸೆಣಸೆ ಮೂಗರಿವೊಂ

೯. ಕದನೈಕ ಸೂದ್ರಕಂ ಬುತುಗನಙ್ಕಕಾಱ ಶ್ರೀಮತ್ ಮಣಲೆರಙ್ಗ ಅನುವರದೊಳ್ ಮೆಚ್ಚಿ ಬೇಡಿಕೊಳ್ಳೆನ್ದೊ

೧೦. ಡೆ ದಯೆಯ ಮೆಱೆವೊಳೆಮ್ಬ ಕಾಳಿಯಂ ದಯೆಗೆಯ್ಯನ್ದು ಕೊಣ್ಡಾನಾ ನಾಯ ಕೆಱಲೆನಾಡ ಬೆಳತೂರ ಪಡು.

೧೧. ವಣದೆಸೆಯ ಮೊಱಡಿಯೊಳ್ ಪಿರಿಯ ಪನ್ದಿಗೆ ವಿಟ್ಟೋಡೆ ಪನ್ದಿಯುಂ ನಾಯಮೊಡಸತ್ತುವದರ್ಕ್ಕೆ

೧೨. ಯಾತುಕೂರೊಳ ಚಲ್ಲೇಶ್ವರದ ಮುನ್ದೆ ಕಲ್ಲನ್ನಡಸಿ ಪಿರಿಯ ಕೆಱೆಯ ಕೆಱಗೆ ಮಱ್ತೆಕಾಲಙ್ಗಳೊಳಿರ್ಕ್ಕಣ್ಡುಗಂ. . . . .

[ಎ.ಕ.೭ (೧೯೭೯) ಮದ್ದೂರು ೪೨. ಕ್ರಿ.ಶ. ೯೪೯–೫೦. ಆತಕೂರು (ಮಂಡ್ಯಜಿಲ್ಲೆ ಮದ್ದೂರು ತಾಲ್ಲೂಕು) ಪು. ೨೭೬–೭೭] **Inscriptions of the Westerm Gangas (1984), No. 135. 949-50A.D.**

ಕಾಳಿ ಎಂಬುದು ಬಹು ಸಾಹಸಿಯಾದ ಹೆಣ್ಣುನಾಯಿ; ದಯೆಯ ಮಱಿವೊಳ್–ಎಂಬ ವಿಶೇಷಣವೂ, ಅದರ ಮುಂದಿನ ಹಂದಿಯೊಡನೆ ಹೋರಾಡಿ ಸತ್ತ ವರ್ಣನೆಯೂ ಗಮನಿಕೆಗೆ ತಕ್ಕುದಾಗಿದೆ. ಲೋಕನೆಂಬ ಹೆಸರಿನ ನಾಯಿ ೭೫ ಹಂದಿಗಳನ್ನೂ ಧಱಿಗನೆಂಬ ನಾಯಿ ೨೬ ಹಂದಿಗಳನ್ನೂ ಕೊಂದ ದಾಖಲೆಯು ಶಾಸನದಲ್ಲಿದೆ [ಎ.ಕ. ೧೦. ಮುಳಬಾ. ೮೫. ಸು. ೯೭೫.]. ಮಣಲೆರನು ಬೇರೆ ಏನನ್ನೂ ಬೇಡದೆ ಈ ಒಂದು ನಾಯಿಯನ್ನೇ ಬಯಸಿದ್ದು ಅದರ ವಿಶೇಷ ಗುಣ ಸಾಮರ್ಥ್ಯವನ್ನು ಗಮನಿಸಿಯೇ ಎಂದು ತಿಳಿಯಬಹುದು. ಹಂದಿಯೊಂದರ ಮೇಲೆ ಈ ಕಾಳಿ ನಾಯಿಯನ್ನು ಛೂ ಬಿಡಬೇಕಾದ ಅನಿವಾರ್ಯ ಪ್ರಸಂಗ ಏನು ಒದಗಿ ಬಂದಿತೆಂಬುದನ್ನು ಶಾಸನ ದಾಖಲಿಸಿಲ್ಲ. ಪ್ರಾಯಃ ಒಕ್ಕಳ ಮಕ್ಕಳ ಹೊಲಗದ್ದೆ ಬೆಳೆಯನ್ನು ತಿಂದು ತುಳಿದು ಹಾಳು ಮಾಡುತ್ತಿದ್ದ ಕಾಡು ಹಂದಿಯ ಮೇಲೆ ಕಾಳಿ ನಾಯಿಯನ್ನು ಬಿಟ್ಟಿರಬಹುದು. ಹಂದಿಯ ಕಾಳಗದಲ್ಲಿ ಹೋರಾಡಿ, ಹಂದಿಯನ್ನೂ ಕೊಂಡು ತಾನೂ ಸತ್ತ ಕಾಳಿನಾಯಿಗೆ ಮಣಲೆರನು ಮಾಡಿದ ಮರಣೋತ್ತರ ಕ್ರಿಯೆಯು, ವೀರನೊಬ್ಬನ ವೀರಮರಣಕ್ಕೆ ಮಾಡುವ ಉತ್ತರ ಕ್ರಿಯಾದಿ ಶವಸಂಸ್ಕಾರಕ್ಕೆ ಸದೃಶವಾಗಿದೆ. ನಾಯಿಯ ನೆನಪಿಗೆ ನೆಲಹೊಲ ಬಿಟ್ಟುಕೊಟ್ಟಿರುವುದು ಮತ್ತು ಅದರ ಶಾಪಾಶಯ ಇದಿಷ್ಟೂ ಮಣಲೆರನ ಗುಣ ಸ್ವಭಾವವನ್ನು ಬಿಂಬಿಸುವ ರನ್ನಗನ್ನಡಿಯಾಗಿದೆ. ಉದಾರತೆ, ಅನುಕಂಪ, ಇನ್ನೊಂದು ಜೀವಕ್ಕೆ(ಅದು ಪ್ರಾಣಿಯೇ ಆದರೂ) ತೋರುವ ಗೌರವ ಕೃತಜ್ಞೆಗಳು–ಈ ಭಾವನೆಗಳು ಮಣಲೆರನ ವ್ಯಕ್ತಿತ್ವಕ್ಕೆ ಶೋಭೆ ತಂದಿವೆ. ಜೈನ ಸಂಸ್ಕಾರದತ್ತವಾದ ಪ್ರಾಣಿದಯೆಗಿಂತ ಇಲ್ಲಿ ಮಣಲೆರನು ಕಾಳಿನಾಯಿಯ ವಿಚಾರದಲ್ಲಿ ನಡೆದುಕೊಂಡ ರೀತಿಗೆ ಪ್ರೇರಣೆಯಾಗಿರುವುದು, ಆ ನಾಯಿ ಚಕ್ರವರ್ತಿಯ ಕೊಡುಗೆಯಾಗಿ ಬಂದದ್ದು ಎಂಬ ಭಾವನೆ.

ತನ್ನ ಸಾಮಂತಿಕೆಯ ಕೆಳಲೆ ನಾಡಿನಲ್ಲಿದ್ದ ಬೆಳತೂರ ಪಡುವಣ ದೆಸೆಯ ಮೊರಡಿಯಲ್ಲಿ ಹಂದಿಯ ಮೇಲೆ ಕಾಳಿಯನ್ನು ಭೂ ಬಿಟ್ಟನು. ಈ ಬೆಳತೂರು ಎಂಬುದು ಈಗಿನ ಕೊಕ್ಕರೆ ಬೆಳ್ಳೂರು.

ಮಣಲೆರನ ವಿಚಾರದಲ್ಲಿ, ಮೇಲಿನ ವಿವರಣೆಗಿಂತ ಭಿನ್ನವೂ ಪೂರಕವೂ ಮತ್ತು ಚರಿತ್ರೆಗೆ ಮುಖ್ಯವೂ ಆದ ಮತ್ತೊಂದು ಬೀರಸಿರಿಯೆಂದರೆ, ಆತನು ತಕ್ಕೊಳ ಕಾಳೆಗದಲ್ಲಿ ಮೆರೆದ ಸಾಟಿಯಿಲ್ಲದ ಸಾಹಸ. ಶಾಸನಕವಿ (ಪೊನ್ನನು?) ಇದನ್ನು ಬಹು ಪ್ರಭಾವಶಾಲಿಯಾಗಿ, ಕಾವ್ಯಮಯವಾಗಿ, ಕಣ್ಣಿಗೆ ಕಟ್ಟುವಂತೆ ಕಡೆದು ನಿಲ್ಲಿಸಿದ್ದಾನೆ. ಎರಡು ಚಂಪಕಮಾಲಾ ವೃತ್ತಗಳಲ್ಲಿ:

ಉಱದಿದಿರಾನ್ತ ಚೋಟಿ ಚತುರಙ್ಗ ಬಲಙ್ಗಳನಟ್ಟಿಮುಟ್ಟಿತ
ಳ್ತಿಱಿವೆಡೆಗೊರ್ವ್ವರಪ್ಪೊಡಮಿದಿರ್ಚ್ಚುವಗಣ್ಡರನಾಂಮ್ವೆವೆನ್ದ್ವಪೊ
ಟ್ಟೆಳಿಸುವ ಬೀರರರಂ ನೆಱೆಯ ಕಾಣೆಮೆ ಚೋಟನೆ ಸಕ್ಕಿಯಾಗೆ ತ
ಳ್ತಿಱಿದುದನಾಮೆ ಕಣ್ಡೆವೆನೆ ಮೆಚ್ಚದೊರಾರ್ಸ್ವಗರ ತ್ರಿಣೇತ್ರನಂ ||

ನರಪಱಿ ಬೆನ್ನೊಳಿಟ್ಟೊದಿರಾನ್ತುದು ವೈರಿಸಮೂಹಮಿಲ್ಲಿಮ
ಚ್ಚರಿಸುವರೆಲ್ಲರುಂ ಸೆರಗುವಾಟ್ದಪೊರಿನ್ನಿರೆನನ್ದು ಸಿಙ್ಗದ
ನ್ನಿರೆ ಹರಿಬೀರಲಕ್ಷ್ಮಿ ನೆರವಾಗಿರೆ ಚೋಟನ ಕೋಟೆಯೆಮ್ಬ ಸಿ
ನ್ದುರದ ಶಿರಾಗ್ರಮಂ ಬಿರಿಯೆ ಪೊಯಿದಂ ಕದನೈಕ ಸೂದ್ರಕಂ ||

[ಎ.ಇ.೨. ಪು. ೧೭೧–೭೨: ಎ.ಕ.೭ (೧೯೭೯) ಮದ್ದೂರು. ೪೨. ೯೪೯–೫೦]

ಗಂಗರ ಮಹಾಮಂಡಲೇಶ್ವರನಾದ ಇಮ್ಮಡಿ ಬೂತುಗನು 'ಮಣಲೆರಂ ತನ್ನ ಮುನ್ದೆ ನಿನ್ದಿಱಿದುದರ್ಕ್ಕೆ ಮೆಚ್ಚಿ ಆತಕೂರ್ಪ್ಪನ್ನೆರಡುಂ ಬೆಳ್ವೊಲದ ಕಾದಿಯೂರುಮಂ ಬಾಳ್ಗಚ್ಚು ಗೊಟ್ಟಂ' [ಎ.ಕ.೩–೧ (ಹಳೆಯ ಆವೃತ್ತಿ) ಮಂಡ್ಯ ೧೪೧ ಪು. ೧೩೬] ಬೂತುಗನಿಂದ ನೆತ್ತರು

ಕೊಡುಗೆಯನ್ನು ಪಡೆದ ಧೀರನಾದ ಮಣಲೆರನ ಮತ್ತು ಆತನಿಂದ, ಸಗರವಂಶದ ಪರ್ಯಾಯ ಹೆಸರಾಗಿ ಮೊದಲಿಂದ ಇದ್ದುದಕ್ಕಿಂತ ಮತ್ತಷ್ಟು ಜನಮನ್ನಣೆ ಪಡೆಯಿತು. ಈ ವಂಶದ ಆರಂಭದಿಂದಲೂ ಮಣಲೆರ ಎಂಬ ಹೆಸರು ಪ್ರಚಲಿತವಾಗಿ ತ್ತೆಂಬುದು ದಿಟ; ಆದರೆ ಆತುಕೂರು ಮಣಲೆರನಿಂದ ಅದು ಉಜ್ವಲತರವಾಯಿತು.

ಈ ಹಂತದಲ್ಲಿಯೇ ಚರ್ಚಿಸಬೇಕಾದ ಹಲವು ಸಂಗತಿಗಳಿವೆ. ಮಣಲೆರನಿಗೆ ಬಾಳ್ಗಚ್ಚುವಾಗಿ, ಯುದ್ಧದಲ್ಲಿ ತೋರಿದ ಪರಾಕ್ರಮಕ್ಕಾಗಿ ಯುದ್ಧಾಂತ್ಯದಲ್ಲಿ ಆತನ ಕತ್ತಿಯನ್ನು ತೊಳೆದು ಕೊಟ್ಟ ಮಾನ್ಯಗಳು ಎರಡು: ೧. ಆತುಕೂರು ೨. ಬೆಳ್ವೊಲದ ಕಾದಿಮೂರು. ಜತೆಗೆ ಮಣಲೆರನಿಗೆ ಇದ್ದ ನಾನಾ ಪ್ರಶಸ್ತಿಗಳ ಚಾರಿತ್ರಿಕ ಮಹತ್ವವನ್ನು ಪರಿಶೀಲಿಸಬಹುದು. ಆತುಕೂರು ಇರುವುದು ಹಳೆಯ ಮೈಸೂರು ಪ್ರದೇಶದಲ್ಲಿ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ (ಈ ಶಾಸನ ದೊರೆತ ಎಡೆ). ಬೆಳ್ವೊಲದ ಪ್ರದೇಶವಿರುವುದು ಉತ್ತರ ಕರ್ನಾಟಕದಲ್ಲಿ: ಬೆಳ್ವೊಲ ಮುನ್ನೂರು ಮತ್ತು ಪುಲಿಗೆಱೆ ಮುನ್ನೂರು ಸೇರಿ ಆಗುವ ಎರಡು ಅಱುನೂಱಿರ ಪ್ರದೇಶ ಚರಿತ್ರಕಾರರಿಗೆ ಚಿರಪರಿಚಿತ [ಎ.ಇ. ೧೨, �፧೩೧. ೯೨೯: ಕ.ಇ. ೧–೨೪ ೧೧೪೮.: ಸೌ.ಇ.ಇ. ೧೧, ೨. ೨೦೪].

ಹತ್ತನೆಯ ಶತಮಾನದ ತರುವಾಯ ಈ ಮಣಲೆರ ಕುಲದವರ ಕರ್ಮಭೂಮಿಯೆಲ್ಲ ಪುರಿಗೆರೆಯ ಪರಿಸರವೆಂಬುದು ಶಾಸನಗಳಿಂದ ತಿಳಿದು ಬರುವ ಸಂಗತಿ. ಮುಖ್ಯವಾದ ವಿಚಾರವೆಂದರೆ ಆತುಕೂರ ಶಾಸನೋಕ್ತ ಮಣಲೆರನಿಗೆ ಬೆಳ್ವೊಲ ಭಾಗದ ಊರೊಂದನ್ನು ಮಾನ್ಯವಾಗಿ ಬೂತುಗನು ಕೊಡಲು ಆತನಿಗೆ ಇದ್ದ ಅಧಿಕಾರವ್ಯಾಪ್ತಿಯ ಔಚಿತ್ಯ. ಆತಕೂರು ಶಾಸದಲ್ಲಿಯೇ (ಸಾಲು: ೨೦–೨೧) ಬರುವ ವಿವರ ಮನನೀಯವಾಗಿದೆ: ಸ್ವಸ್ತಿಶ್ರೀ ಎಱೆಯಪ್ಪನ ಮಗಂ ರಾಚಮಲ್ಲನಂ ಬೂತುಗಂ ಕಾದಿಕೊನ್ದು ತೊಮ್ಬುತಱು ಸಸಿರಮುಮಂ ಆಳುತ್ತಿರೆ ಕನ್ನರದೇವಂ ಚೋೞನಂ ಕಾದುವನ್ದು ಬೂತುಗಂ ರಾಜಾದಿತ್ಯನಂ ಬಿಸುಗೆಯ ಕಳನಾಗಿ ಸುರಿಗಿಱಿದು

ಕಾದಿಕೊನ್ದು ಬನವಸೆ ಪನ್ನಿರ್ಚ್ಛಾಸಿರಮುಂ ಬೆಳ್ವೊಲ ಮೂನೂಱುಂ ಪುರಿಗೆಱೆ ಮೂನೂಱಂ ಕಿಸುಕಾಡೆಪ್ಪಿತ್ತುಂ ಬಾಗಿನಾಡೆಪ್ಪಿತ್ತುವಂ ಬೂತುಗಙ್ಗೆ ಕನ್ನರದೇವಂ ಮೆಚ್ಚುಗೊಟ್ಟಂ || ಈ ವಿಶಿಷ್ಟ ಘಟನೆ ಮತ್ತು ಶಬ್ದ ಪ್ರಯೋಗವನ್ನು ಪುನರಭಿನಯಿಸಿರುವ ಇನ್ನೊಂದೇ ಒಂದು ಶಾಸನ ಪ್ರಯೋಗವಿದೆ: ಕಾಳೆಗದೊಳಣ್ಣ ವಸಯ್ಯ ಬಿಸುಗೆ ಕಳನಾಗಿ ಸುರಿಗಿಱಿದು ಕಾದಿಸತ್ತನಾತನ ಮಗಂ ಬೂತುಗಙ್ಗ ನೆಱಿಲಗೆಯ ಕಲ್ನಾಡುಕೊಟ್ಟ ಚನ್ದ್ರಾರ್ಕ್ಕ ತಾರಂಬರಂ: [ಎ.ಕ. ೧೫(೧೯೪೩) ೨೩೭. ಆತೇದಿ (ಸು. ೯೬೫) ನೇರಲಿಗೆ (ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು) ಪು. ೩೮].

ಆತಕೂರು ಶಾಸನದ ಈ ವಿವರಣೆಯಿಂದ ಸ್ಪಷ್ಟವಾಗಿ ತಿಳಿದು ಬರುವಂತೆ, ಬೂತುಗನು, ವಾರಿಗೆಯಲ್ಲಿ ತನ್ನ ಸೋದರನಾದ ರಾಚಮಲ್ಲನನ್ನು ಕೊಂದು, ಗಂಗವಾಡಿ ೯೬೦೦೦ ಪ್ರದೇಶವನ್ನು ಆಳುತ್ತಿದ್ದನು. ಕನ್ನರದೇವನು (ಕೃಷ್ಣ೩) ಚೋೞರ ರಾಜಾದಿತ್ಯನನ್ನು ಕೊಲ್ಲಲು ತೋರಿದ ಅಸಾಮಾನ್ಯ ಸಾಹಸದಿಂದ ಸಂಪ್ರೀತನಾದನು. ಬನವಸೆ ೧೨೦೦೦, ಬೆಳ್ವೊಲ ೩೦೦, ಪುರಿಗೆಱೆ ೩೦೦, ಕಿಸುಕಾಡು–೭೦, ಬಾಗಿನಾಡು–೭೦ ಇವನ್ನು ಕನ್ನರದೇವನು ಬೂತುಗನಿಗೆ ನೀಡಿದನು. ಆತಕೂರು ಶಾಸನದ ಕಾಲ ಕ್ರಿ.ಶ. ೯೪೯–೫೦. ಅಂದರೆ ಈ ಅವಧಿಯಲ್ಲಿ ಕನ್ನರನು ಮೇಲೆ ಹೆಸರಿಸಿದ ಪ್ರದೇಶಗಳನ್ನು ಬೂತುಗನಿಗೆ ಇತ್ತನೆಂದಾಯಿತು.

ಆದರೆ ಕನ್ನರದೇವನ ಬಾವನ್ನೂ, ನನ್ನಿಯಗಂಗನೂ ಆದ ಮಹಾಮಾಂಡಲಿಕ ಬೂತಯ್ಯ ಪೆರ್ಮಾಡಿಯು ಗಂಗವಾಡಿ, ಬೆಳ್ವೊಲ, ಪುಲಿಗೆಱೆ ಪ್ರಾಂತ್ಯಗಳನ್ನು ಕ್ರಿ.ಶ. ೯೪೨ ರ ವೇಳೆಗಾಗಲೇ ಆಳುತ್ತಿದ್ದುದಾಗಿ ಶಾಸನಗಳಿಂದಲೇ ತಿಳಿದು ಬರುತ್ತದೆ. [(ಸೌ.ಇ.ಇ. ೧೧–೧, ೩೬–೯೪೨. ರೋಣ (ಧಾರವಾಡ ಜಿಲ್ಲೆ): ಅದೇ, ೩೭.೯೪೬ ಕುರ್ತ್ತಕೋಟಿ (ಕರುತ್ತಕುಂಟೆ, ಧಾರವಾಡ ಜಿಲ್ಲೆ, ಗದಗ ತಾಲ್ಲೂಕು): ಅದೇ, ೩೮, ೯೫೦. ನರೇಗಲ್ (ಧಾರವಾಡ ಜಿಲ್ಲೆ, ರೋಣ ತಾಲ್ಲೂಕು)]. ಬೂತುಗನು ಕ್ರಿ.ಶ. ೪೨–೪೬೦ರ ವೇಳೆಗಾಗಲೇ ಮೇಲ್ಕಂಡ ಪ್ರದೇಶಗಳನ್ನು ಆಳುತ್ತಿದ್ದುದನ್ನು ತಿಳಿಸುವ ಶಾಸನಗಳಿವೆ. ಹೀಗಿರುವಾಗ ಈಗ ಮತ್ತೆ ಅದೇ ಆತಕೂರು ಶಾಸನವು ಕನ್ನರದೇವನು

ಕ್ರಿ.ಶ. ೯೫೦ ರಲ್ಲಿ ಅದೇ ಭಾಗಗಳನ್ನು ಬೂತುಗನಿಗೆ ನೀಡಿದನೆಂದು ಹೇಳುತ್ತಿರುವುದು ವಿರೋಧಾಭಾಸವೆನಿಸಬಹುದು. ಅಲ್ಲದೆ ಹೆಬ್ಬಾಳದ ಶಾಸನಾಧಾರದಿಂದ ಖಚಿತವಾಗುವಂತೆ, ಬೂತುಗನು ಈ ಎಲ್ಲ ಪ್ರಾಂತ್ಯಗಳನ್ನು ಕನ್ನರದೇವನ ಸೋದರಿಯಾದ ರೇವಕೆ (ರೇವಕ ನಿಮ್ಮಡಿ) ಯನ್ನು ಮದುವೆಯಾದಾಗ ಬಳವಳಿಯಾಗಿ ಪಡೆದನು [ಎ.ಇ.೪, ಪು. ೩೫೦ ಹೆಬ್ಬಾಳ]. ಈ ಮದುವೆಯು ಬಹುಶಃ ಕ್ರಿ.ಶ. ೯೪೦ ರ ಸುಮಾರಿಗೆ ನಡೆದಿರುವಂತೆ ತೋರುತ್ತದೆ. ರೋಣ, ಹೆಬ್ಬಾಳದ ಶಾಸನಗಳಲ್ಲದೆ ಗಾವರವಾಡದ ಶಸನವೂ ಬೂತುಗನನ್ನು ಕೃಷ್ಣರಾಜನ ಬಾವನೆಂದು ನಮೂದಿಸಿದೆ:

> ಶ್ರೀ ವಸುಧೇಶನ ಭಾವಂ
> ರೇವಕನಿರ್ಮ್ಮಡಿಯ ವಲ್ಲಭಂ ಭೂತುಗನಾ
> ತ್ಮಾವಗತ ಸಕಳಶಾಸ್ತ್ರನಿ
> ಳಾವಿಶ್ರುತ ಕೀರ್ತ್ತಿಗಂಗಮಣ್ಡಲನಾಥಂ ||

[ಎ.ಇ. ೧೫,೨೩. ೧೦೭೧-೭೨ ಗಾವರವಾಡ (ಧಾರವಡ ಜಿಲ್ಲೆ ಗದಗ ತಾಲ್ಲೂಕು) ಪು. ೩೩೭-೩೮]. ಆದ್ದರಿಂದ ಬೂತುಗಳನ್ನು ಕ್ರಿ.ಶ. ೯೪೦ ರಿಂದ ೯೪೬ ರವರೆಗೂ ಮೇಲೆ ಉಲ್ಲೇಖಿಸಿದ ಪ್ರಾಂತಗಳನ್ನು ಅಬಾಧಿತವಾಗಿ ಆಳುತ್ತಿದ್ದನು. ಆದರೆ ಕ್ರಿ.ಶ. ೯೪೬ ರಿಂದ ೯೪೯ ನಡುವಣ ನಾಲ್ಕು ವರ್ಷದ ಅವಧಿಯಲ್ಲಿ ಈ ಪ್ರದೇಶಗಳ ಒಡೆತನವನ್ನು ಬೂತುಗನಿಂದ ಕಸಿದು ಕೆಳಕ್ಕೆ ತಳ್ಳಲಾಯಿತು, ಭೂತುಗನಿಂದ ಆ ಭಾಗಗಳನ್ನು ಕಿತ್ತುಕೊಂಡು ಆಳುತ್ತಿದ್ದವನು ರಾಜಮಲ್ಲ ೩. ಬೂತುಗನು ನನ್ನಿಯಗಂಗ ೧ ರಾಜನ ಮೊಮ್ಮಗ, ಇಮ್ಮಡಿ ಪೃಥ್ವೀಪತಿಯ ಮಗ. ಇಮ್ಮಡಿ ರಾಚಮಲ್ಲನು ನೀತಿಮಾರ್ಗ ಎಱೆಗಂಗ ೧ ರಾಜನ ಮಗ. ಹೀಗಾಗಿ ವಾರಿಗೆಯಲ್ಲಿ ಇವರು ಅಣ್ಣತಮ್ಮಂದಿರೂ ಹೌದು. ಚಕ್ರವರ್ತಿ ಕನ್ನರದೇವನು ತನ್ನ ಬಾವ ಬೂತುಗನಿಗೆ ಆ ಕೈಜಾರಿಹೋದ ಭಾಗಗಳ ಒಡೆತನವನ್ನು ಮತ್ತೆ ಪಡೆದುಕೊಡಲು ನೆರವಿಗೆ ನಿಂತನು, ಬೂತಗನು ರಾಚಮಲ್ಲನನ್ನು ಕೊಲ್ಲುವ

ಯುದ್ಧದಲ್ಲಿ ಸೈನ್ಯದ ಸಹಾಯವನ್ನೂ ನೀಡಿದನು. [ಎ.ಇ. ೫ **Deoliplates.** ೯೪೦ ಕ್ರಿ.ಶ. ಪು. ೧೮೦] ರಾಚಮಲ್ಲ II ರಾಜನನ್ನು ಬೂತುಗನು ಕ್ರಿ.ಶ. ೯೩೮–೪೯ ರ ಸುಮಾರಿನಲ್ಲಿ ಕೊಂಡನೆಂದು ಹೇಳಬಹುದು. ಅದರಿಂದ ಬೂಟುಗನ ಹಾದಿ ಸುಗಮವಾಗಿ ಕನ್ನರದೇವನು ಎರಡನೆಯ ಬಾರಿಗೆ ಅಧಿಕೃತವಾಗಿ ೯೫೦ರಲ್ಲಿ ಮೇಲ್ಕಂಡ ಪ್ರದೇಶಗಳ ಒಡೆತನವನ್ನು ಬೂತುಗಣೆಗೆ ಪುನರ್ ನವೀಕರಿಸಿದನು, ಅಂದರೆ ಬೂತುಗನು, ತನ್ನಿಂದ ೯೩೬–೯೪೯ ರ ಅವಧಿಯಲ್ಲಿ ತಪ್ಪಿಹೋಗಿದ್ದ ತನ್ನವೇ ಆಗಿದ್ದ ಸೇರಿದ ಒಸಗೆಯ ಗಳಿಗೆಯಲ್ಲಿ, ಬೂತುಗನು ಮಣಲೆರನಿಗೆ ಆತುಕೂರ ಮತ್ತು ಬೆಳ್ವೊಲದ ಕಾದಿಯೂರು ಗ್ರಾಮಗಳನ್ನು ನೀಡಿದನೆಂಬ ಐತಿಹಾಸಿಕ ಹಿನ್ನಲೆಯನ್ನೂ ಮನಗಾಣಬೇಕು. ಆತುಕೂರು ಇತ್ತ ಗಂಗವಾಡಿಯ ಪ್ರದೇಶದಲ್ಲೂ, ಕಾದಿಯೂರು ಅತ್ತ ಬೆಳ್ವೊಲದ ಪ್ರದೇಶದಲ್ಲೂ ಇದ್ದುದರೂ. ಈ ಎರಡೂ ಭಾಗವು ಆಗ ಜೈನಧರ್ಮದ ಆಡುಂಬೊಲವಾಗಿತ್ತು.

ಆತುಕೂರು ಶಾಸನದಲ್ಲಿ ಮಣಲೆರನಿಗೆ ಹಲವು ಪ್ರಶಸ್ತಿಗಳನ್ನು ಹೇಳಲಾಗಿದೆ ಉದಾರ ಭಗೀರಥ, ಇರ್ಜಿವ ಬೆಡಂಗ, ಸಗರ ತ್ರಿಣೇತ್ರ, ಸೆಣಸೆ ಮೂಗರಿವೊಂ. . . ಕದನೈಕ ಸೂದ್ರಕ, ಬೂತುಗನಂಕ ಕಾಱ, ಗಂಗ ಪ್ರವಾಹೋದಾರ ಇತ್ಯಾದಿ. ಈ ಬಿರುದುಗಳು ಮಣಲೆರನ ವ್ಯಕ್ತಿತ್ವವನ್ನು ಪ್ರಕಾಶಿಸಿವೆ. ಗಂಗರ ಜತೆಗೆ ಆತನಿಗಿದ್ದ ಅತ್ಮೀಯತೆಯನ್ನೂ ಯುದ್ಧಗಳಲ್ಲಿನ ನೈಪೂಣ್ಯವನ್ನೂ, ವೈರಿಗಳ ಪಾಲಿಗೆ ಭಯಂಕರನೂ, ಬೂತಗನಿಗೆ ವಿಧೇಯನೂ ಆಗಿದ್ದುದನ್ನು ಈ ಬಿರುದು ಬಾವಲಿಗಳು ಸಾರುತ್ತವೆ. ಸಗರ ತ್ರಿಣೇತ್ರ–ಎಂಬ ಬಿರುದು, ಈತನ ಸಗರವಂಶದಲ್ಲಿಯೇ ಅತಿ ಪ್ರಮುಖನೆಂಬುದನ್ನು ನಿಲ್ಲಿಸುವ ಮತು ಇರ್ಜಿವಬೆಡಂಗ ಆತನು ಇರ್ಜಿವ ಬೆಡಂಗ ಸತ್ಯಾಶ್ರಯನೆಂದೇ ಚರಿತ್ರೆಯಲ್ಲೂ ಕಾವ್ಯಗಳಲ್ಲೂ ಪ್ರಸಿದ್ಧನಾಗಿದ್ದಾನೆ. [ಬಾ.ಕ.ಇ. ೧೯೩೮. ಇಂಡಿ ೫೯. ಕ್ರಿ. ಶ. ೯೮೬: ರನ್ನ, ಸಾಹಸಭೀಮವಿಜಯ ೧–೧೪: ಸೌ.ಇ.ಇ. ೧೧–೧, ೪೮. ಕ್ರಿ.ಶ. ೧೦೦೨ ಗದಗ] ಇಟಿವ ಕನ್ನರ [ಎ.ಕ. ೧೧, ಚಿತ್ರದುರ್ಗ. ೪೯. ೯೪೨] ಇಟಿವ ನೊಟಿಂಬ [ಎ.ಕ೯(ಸೌ), ಹೊಸಕೋಟೆ ೨೦೭.೯೦೦: ಮೈ.ಆ.ರಿ. ೧೯೩೨, ೪೮. ೯೬೦] ಇರ್ಜಿವರ್ತಿಗಂಡ

ಮೊದಲಾದ ಬಿರುದುಗಳ ಗುಂಪಿಗೆ ಸೇರಿದ್ದು ಇಱಿವ ಬೆಡಂಗ ಎಂಬುದು. ಈ ಬಿರುದು ಸತ್ಯಾಶ್ರಯನಿಗಂತಲೂ ಮೊಟ್ಟಮೊದಲು ಪ್ರಯೋಗವಾಗಿರುವುದು ಮಣಲೆರನಿಗೇ ಎಂಬುದು ಗಮನಾರ್ಹವಾಗಿದೆ. ಗಂಗರು ಮತ್ತು ರಾಷ್ಟ್ರಕೂಟರನ್ನು ಗೆದ್ದ ತೈಲಪ–ಸತ್ಯಾಶ್ರಯರು, ತಾವು ಸೋಲಿಸಿದವರ ಬಿರುದು ಬಾವಲಿಗಳನ್ನು ತಮ್ಮ ಪ್ರಶಸ್ತಿ ಹಾರದಲ್ಲಿ ಪೋಣಿಸಿಕೊಂಡರು.

ಕದನೈಕ ಸೂದ್ರಕ ಎಂಬ ಬಿರುದೂ ಸಹ ಇಷ್ಟೇ ಪ್ರಾಮುಖ್ಯ ಪಡೆದಿದೆ; ಇಱಿವಬೆಡಂಗದಂತೆಯೇ ಇದೂ ಸಹ ಯುದ್ಧವೀರನ ಪರಾಕ್ರಮಕ್ಕೆ ಕೆತ್ತಿದ್ದ ಪ್ರಶಸ್ತಿಯಾಗಿದೆ. ಕದನ ತ್ರಿಣೇತ್ರ [ಸೌ.ಇ.ಇ. ೨೦. ೫೫. ೧೦೮೨. ಲಕ್ಷ್ಮೇಶ್ವರ], ಕದನ ಮಹೇಶ್ವರ [ಅದೇ: ೪೭. ೧೦೭೪ ಲಕ್ಷ್ಮೇಶ್ವರ], ಕದನ ಮಾರ್ತಂಡ [ಅದೇ: ೪೧. ೧೦೬೮. ಬನವಾಸಿ (ಉ.ಕ., ಸಿರಸಿ ತಾ)] ಎಂಬವೆಲ್ಲ ಕದನೈಕ ಸೂದ್ರಕ ಗುಂಪಿನ ಪ್ರಶಸ್ತಿಗಳು. ಮಣಲೆರನಿಗ ಇಂಥ ಪ್ರಶಸ್ತಿ ಮಾಲಿಕೆಯನ್ನು ತೊಡಸಿರುವುದರಿಂದ ಆತನಿಗೆ ಇದ್ದ ಸಾಮಾಜಿಕ ಪುರಸ್ಕಾರವೂ ಧ್ವನಿತವಾಗುತ್ತದೆ. ಮೇಲ್ಕಂಡ 'ಕದನ–ತ್ರಿಣೇತ್ರ' ಮತ್ತು 'ಕದನ–ಮಹೇಶ್ವರ' ಎಂಬ ಸಮನಾರ್ಥಕ ಪ್ರಶಸ್ತಿಗಳೂ ಸಹ ಮಣಲೆರ ವಂಶದ ಇಮ್ಮಡಿ ಜಯಕೇಸಿಗೆ ಮುಂದೆ ಅನ್ವಯಿಸಿ ಹೇಳಿರುವುದು ಕೂಡ ಸ್ವರಸ್ಯವಾಗಿದೆ.